

ಸಂಪುಟ ೯ | ಫೆಬ್ರವರಿ ೧೯೫೧ | ಸಂಚಿಕೆ ೧೧

ಕುಹಕಿಡಿಗಳು

" ಸಬ್‌ಕೋ ಸನ್ಮತಿ ದೇ ಭಗವಾನ್ "

ಎಂದು ಮನಸಾರೆ ಪ್ರಾರ್ಥಿಸುತ್ತಾಳೆ ಕೊರವಂಜಿ. ಜನವರಿ ಮೂವತ್ತನೆಯ ತಾರೀಖನ್ನು ನೆನೆಸಿಕೊಂಡು.

ನಮ್ಮ ಗ್ರಾಮ ಪಂಚಾಯಿತಿಯಲ್ಲಿ—ಪೌರಸಭೆಯಲ್ಲಿ—ಸಂಸ್ಥಾನಗಳ ಸಚಿವ ಮಂಡಲದಲ್ಲಿ—ಭಾರತ ಕೇಂದ್ರ ಸಚಿವ ಮಂಡಲದಲ್ಲಿ—ಕಾಮನ್‌ವೆಲ್ತ್ ರಾಷ್ಟ್ರಗಳ ನಾಯಕರುಗಳಲ್ಲಿ—ಹಾಗೂ ಯೂ. ನೋದಲ್ಲಿ, ಪ್ರತಿನಿಧಿಗಳಿಗೆ—

"ಸನ್ಮತಿ ದೇ ಭಗವಾನ್" ಎಂದು ಹೃದಯಾಂತರಾಳದಿಂದ ಬೇಡುತ್ತಾಳೆ.

* * *

"ರಿಪಬ್ಲಿಕ್ ಡೆ" ಸಂತೋಷದಲ್ಲಿ ನಮ್ಮ ಕರ್ತವ್ಯವನ್ನು ಮರೆಯಬಾರದು ಎಂದು ಜನವರಿ ಮೂವತ್ತನೇ ತಾರೀಖು ನೆನಪು ಕೊಡಬೇಕು! ಅಲ್ಲವೇ?

* * *

ಇಂಗ್ಲೆಂಡಿನಲ್ಲಿ ಸಾರ್ವಜನಿಕರಿಗೆ ಪುಕ್ಕಟೆ ಕನ್ನಡಕ ಕೊಡುತ್ತಾರಂತೆ.

—ನಮ್ಮ ರೇಷನ್ ಷೋತಾ ಮಾಡುವಾಗ—ಭೂತಕನ್ನಡಿಯನ್ನಾದರೂ ಸರ್ಕಾರವು ಕೊಟ್ಟರೆ—ಅದನ್ನು ಹಾಕಿಕೊಂಡು ಊಟ ಮಾಡಿದರೆ ಹೊಟ್ಟೆ ಹಿತವಾಗ ಬಹುದು!

*　　*　　*

ಯೂನೋದಲ್ಲಿ ಕ್ರಮೇಣ ಎರಡು ಗುಂಪುಗಳಾಗುತ್ತಿವೆ ಎಂದು ಓದಿದ ಮಂಚೇಗೌಡರು "ಯೂ. ನೋ. ಏನು ಮಹಾ! ನಮ್ಮ ಮುನ್ಸಿಪಾಲ್ಟಿ ಹಾಗೇ ತಾನೇ!" ಎಂದು ಮೂದಲಿಸಿದರಂತೆ.

*　　*　　*

ಚಿನ್ನದ ಗಣಿಯನ್ನು ರಾಷ್ಟ್ರವೇ ನಡೆಸಬೇಕೇ? ಅಥವಾ ಖಾಸಗೀ ಕಂಪನಿ ನಡೆಸಬೇಕೆ? ಎಂಬ ಪ್ರಶ್ನೆ ಈಗ ಇತ್ಯರ್ಥವಾಗಿದೆಯಂತೆ.

—ಚಿನ್ನ ಕಂಪೆನಿಗೆ. ಗಣಿ ರಾಷ್ಟ್ರಕ್ಕೆ. ಎಂದು ಒಪ್ಪಿಗೆಯಾಯ್ತಂತೆ.

*　　*　　*

ಸುಗ್ಗಿ ಬರೋ ಹೊತ್ತಿಗೆ ನಮ್ಮ ಅಮಲ್ದಾರರು ಖಾಯಿಲೆ ಬಿದ್ದು ರಜಾ ತೊಗೊಂಡರು ಎಂದು ಅವರಾಕೆ ಅತ್ತರಂತೆ.

*　　*　　*

"ಜರತಾರಿ ರುಮಾಲನ್ನ" ಏನು ಮಾಡಲಿ ಎಂದೊಬ್ಬರು ಕೇಳಿದ್ದಾರೆ.

—ಅಳುವ ಮಗುವನ್ನು ಆಡಿಸಲು ಉಪಯೋಗಿಸಿ.—ಎಂದು ನಮ್ಮ ಸೂಚನೆ.

*　　*　　*

ಸರ್ಕಾರದ ಮಾನ್ಯ ಅತಿಥಿಗಳಾಗಬೇಕಾದರೆ. ರಾಜಕಾರಣಿಯಾಗ ಬೇಕಿತ್ತು—ಸ್ವಾತಂತ್ರ್ಯ ಬಂದ ಮೇಲೆ. ಪ್ರಸಿದ್ಧ ಆಟಗಾರ, ಪ್ರಸಿದ್ಧ ಸಂಗೀತಗಾರ, ಪ್ರಸಿದ್ಧ ಕಸುಬುದಾರ, ಪ್ರಸಿದ್ಧ ಸಚಿವ ನೆಂಟನಾದರೆ ಸಾಕು! ಎಂದೊಬ್ಬರು ಬರೆದಿದ್ದಾರೆ.

*　　*　　*

ನಮ್ಮ ನೆರೆಯುವರ ಮಗಳು ಹಾರ್ಮೋನಿಯಂ ಕಲಿಯಲು ಶುರು ಹಚ್ಚಿದಾಗಿಂದ ಯೋಚಿಸುತ್ತಿದ್ದೆ. ಮೊನ್ನೆ ನೆರೆಯವರನ್ನ 'ಹಿಡಿದು ಸ್ವಾಮಿ ತಿರುವಾಯೂರಿಗೆ ನೀವು ಮಗಳ ಸಮೇತ ಖಂಡಿತ ಹೋಗಿ ತ್ಯಾಗರಾಜರ ಅನುಗ್ರಹ ಆಗಲೇ ಬೇಕು ಈ ಪ್ರಚಂಡ ಕುವರಿಗೆ' ಎಂದು ಹೇಳಿ ಅಲ್ಲಿಗೆ ಸಾಗಿಹಾಕಿ ನಾಲ್ಕುದಿನ ಸುಖವಾಗಿದ್ದೆ ಎಂದು ಒಬ್ಬರು ಹೇಳಿಕೆ ಕೊಟ್ಟಿದ್ದಾರೆ.

—— o ——

ಉರಿಗಾಳಿ

ಧೂಮಪಾನ ಮದ್ಯಪಾನ ಜೂಜಾಟ ಇವಿಲ್ಲದ ಒಂದು ಊರಿಗೆ ಹೋಗಿ ನೆಲೆಸಬೇಕೆಂಬ ಉದ್ದೇಶದಿಂದ ಒಂದು ಬ್ರಿಟಿಷ್ ಕುಟುಂಬ ೯೦ ಸಾವಿರ ಮೈಲಿ ಪ್ರವಾಸಮಾಡಿ, ನಿರಾಶರಾಗಿದಾರೆ (ಸುದ್ದಿ) ಆ ಕುಟುಂಬದವರು ನೆಲೆಸದೆ ಇರುವುದಕ್ಕಾಗಿಯೇ ಆ ಅಭ್ಯಾಸಗಳನ್ನು ಆ ಊರುಗಳು ಅವಲಂಬಿಸಿರಬಹುದಲ್ಲವೆ ?

*　　*　　*

ಶಾಂತಿಗಾಗಿ ಎಲ್ಲರೂ ಶ್ರಮಿಸಬೇಕು (ನೆಹರು) ನಾವೇನೋ ಉತ್ತರ ಹೇಳದೆ ಸುಮ್ಮನಿರುತ್ತೇವೆ; ಆದರೆ, ನಮ್ಮ ಸತಿಯರಿಗೆ ಬುದ್ಧಿ ಹೇಳುವವರು ಯಾರು ?

*　　*　　*

"ವಿದೇಶೀ ಬಂಡವಾಳ ನಮ್ಮ ದೇಶಕ್ಕೆ ಬರಲು ಕಾರಣ"...... ನಮ್ಮ ಬಂಡವಾಳ ಅವರಿಗೆ ಗೊತ್ತಾಗಿರುವುದರಿಂದಲೇ ಇರಬೇಕು.

*　　*　　*

ವಲ್ಲತ್ತೋಳ್ ಕವಿ ವಾರ್ಸಾದಲ್ಲಿ ನೆರೆದಿದ್ದ ೨೦೦೦ ಪ್ರತಿನಿಧಿಗಳನ್ನು ತಮ್ಮ ಮಲೆಯಾಳಿ ಕವನದಿಂದ ಅಚ್ಚರಿ ಗೊಳಿಸಿದರು (ಸುದ್ದಿ) ನಮಗೂ ಮಲೆಯಾಳಿ ಕವನ ಕೇಳಿದಾಗ ಈ ಅನುಭವ ಆಗಿದೆ.

*　　*　　*

"ಇಂದು ..ಟ್ರೂಮನ್ನರ ಸಹಿ ..ಬಿತ್ತು" (ಶಿರೋನಾಮೆ) ಬಿಡಿ, ಇನ್ನು ಅದಕ್ಕಾಗಿ ವ್ಯಥೆ ಪಡುವುದು ಅನುಚಿತ.

*　　*　　*

ಗಾಂಧಿಜಿಯನ್ನು ಹೊಗಳುವ ನಾಲಿಗೆಗಳನ್ನೆಲ್ಲ ಕತ್ತರಿಸಿ ಅವುಗಳನ್ನು ಮಾತ್ರ ಸ್ವರ್ಗಕ್ಕೆ ಕಳುಹಿಸಲಾಗುವುದೆಂದೂ ಮೇಲಿಂದ ಪ್ರಕಟಣೆ ಹೊರಟಿದೆಯಂತೆ.

*　　*　　*

ಇಂಗ್ಲೆಂಡ್ ಮತ್ತು ಅಮೇರಿಕಾ ಸ್ವತಂತ್ರ ಇಂಡಿಯಾದಲ್ಲಿ ಸ್ಥಾಪಿಸಿರುವ ರಾಯಭಾರಿ ಕಚೇರಿಯವರು ಆ ದೇಶಗಳ ಸ್ಥಿತಿಗತಿಗಳನ್ನು ಹೊಗಳಿ ಬರೆಯು

ವರಿಗೂ ಭಾಷಣ ಮಾಡುವವರಿಗೂ ಅಪಾರ ಹಣ ಕೊಡಲು ಸಿದ್ಧರಿರುವರು, ಎಂಬ ಸುದ್ದಿಗೆ ಆಧಾರ ಸಾಲದಂತೆ.

* * *

"ಮಂತ್ರಿಗಳು ವಾಸಮಾಡುತ್ತಿರುವ ಮನೆಯಲ್ಲಿ ದೆವ್ವವಿದೆ ಎಂಬ ಬೆದರಿಕೆ ಹುಟ್ಟಿದೆ" (ಸುದ್ದಿ) ಇದು ತಿಳಿಯದವರು ಮಾಡುವ ಆರೋಪಣೆಯೋ ತಿಳಿದವರು ಮಾಡುವ ದೂಷಣೆಯೋ ?

* * *

"ನೆಹ್ರೂರವರು ಲಂಡನ್ನಿನಲ್ಲಿ ಕೆಸರು ತುಳಿದೇ ನಡೆದರು" (ವರದಿ) ಕೆಸರಲ್ಲಿ ಬಿದ್ದಿರುವವರನ್ನೆತ್ತಲು ಬೇರೆ ಉಪಾಯವೇ ಇಲ್ಲ.

* * *

ಈ ತಿಂಗಳು ಯಾರ ನಿಧನದ ಬಗ್ಗೆ ಶೋಕ ಸಭೆಗಳನ್ನೇರ್ಪಡಿಸುವುದು ಎಂದು ದೇಶದ ನಾನಾ ಸಂಸ್ಥೆಗಳು ಕುತೂಹಲರಾಗಿರುವರಂತೆ.

* * *

ಈಚೆಗಿನ ವೃತ್ತ ಪತ್ರಿಕೆಗಳನ್ನೋದಿದರೆ, ಸ್ಫೂರ್ತಿದಾಯಕವಲ್ಲದ ಭಾಷಣಗಳನ್ನು ಕೊಡುವವರ ಸಂಖ್ಯೆ ತೀರ ಕಡಮೆಯಾಗುತ್ತಿದೆ ಎಂದು ವಿಷಾದದಿಂದ ಹೇಳಬೇಕಾಗುತ್ತದೆ

* * *

"ಭಾರತದ ಇತರ ಪ್ರದೇಶಗಳಿಗಿಂತ ಮುಂಚೆಯೇ, ಅಲ್ಲಿ ೧೨ ಔನ್ಸು ಕೊಡುತ್ತಿದ್ದರೆ, ಮೈಸೂರು ಸಂಸ್ಥಾನದಲ್ಲಿ ಒಂಬತ್ತೂವರೆ ಔನ್ಸ್ ಧಾನ್ಯ ಒದಗಿಸಿ, ಇತರರಿಗೆ ಮೇಲು ಪಂಕ್ತಿಯನ್ನು ನಾವು ಹಾಕಿ ಕೊಟ್ಟಿದ್ದೇವೆ" (ಪತ್ರಿಕೆ) ಇದರಿಂದಲೇ ಬರಿಯ ಪಂಕ್ತಿ ಭೋಜನವಾದರೂ ನಡೆಯುತ್ತಿದೆ, ಪ್ರಜೆಗಳಿಗೆ.

* * *

ಸಾಹುಕಾರರ ಅಂಗಡೀಲಿ ಗುಮಾಸ್ತೆ ಕೆಲಸ ಸಿಕ್ಕರೂ ಯಾಕೆ ಸೇರಿಕೊಳ್ಳಲಿಲ್ಲ ಎಂಬ ಪ್ರಶ್ನೆಗೆ ಆತ ಉತ್ತರ ಹೇಳಿದನಂತೆ: ಅವರ ಮಗಳಿಗೆ ಮದುವೆಯಾಗಿಹೋಗಿದೆ

* * *

ನೀವು ಯಾಕ್ರಿ, ಮನೆ ಯಜಮಾನರಾಗಿ, ವಾರಕ್ಕೆ ಮೂರು ಬಾರಿ ಸಿನಿಮಾಗೆ ಹೋಗುತ್ತೀರಿ ಎಂಬ ಪ್ರಶ್ನೆಗೆ ಆತ ಉತ್ತರ ಹೇಳಿದನಂತೆ : ಇಲ್ಲದಿದ್ದರೆ ಮನೆಯಲ್ಲಿ ಮಕ್ಕಳಾಡುವ ಮಾತು ಒಂದೂ ಅರ್ಥವಾಗುತ್ತಿಲ್ಲ ನನಗೆ.

ಕೊರವಾವಲೋಕನ

ಏಕಾಗ್ರ ಚಿತ್ತತೆಯಿಂದ ತಟ್ಟೆಯ ಮೇಲೆ ನೆಟ್ಟಕಣ್ಣಿಟ್ಟು ಎರಡು ಚಮಚಾಗಳಿಂದ ಒಂದು ಮಸಾಲ್ ದೋಸೆಯನ್ನು ಚೂರುಮಾಡಿ ತಿನ್ನಲೆತ್ನಿಸುತ್ತಿದ್ದ ಕೊರವ, ನಾನು ಹೋದಾಗ.

ಅವನ ಗೋಳು ನೋಡಲಾರದೆ ಸಹಾಯಕ್ಕೆಹೋದೆ "ಕೊರವ! ಎಡಗೈ ಚಮಚಾದಲ್ಲಿ ಪಲ್ಯ ಅದುಮಿ ಬಲಗೈ ಚಮಚದಲ್ಲಿ ಚೂರುಮಾಡು. ನಂತರ ಎಡಗೈ ಚಮಚಾದಲ್ಲಿ ಪಲ್ಯ ದೋಸೆ ಚೂರನ್ನು ಬಲಗೈ ಚಮಚಕ್ಕೆ ಸಾಗಿಸು. ನಂತರ ಬಾಯಿಗಿಟ್ಟುಕೋ. ನುಂಗು ಎಂದು ನೆರಳು ಚಿತ್ರ ಆಡಿ ತೋರಿಸಿದೆ.

'ಹಾಗೇ ಮಾಡಿದೆಕಣೋ! ಆದರೆ ಈ ದೋಸೆ ತೂತು. ಎಲ್ಲಾ ಶೇಖರಿಸಿ ಬಾಯಿಗಿಡೋ ಹೊತ್ತಿಗೆ ದೋಸೆ ತಟ್ಟೆಗೆ ಜಾರುತ್ತೆ. ತೂತುಗಳು ಮಾತ್ರ ಚಮಚಾಕ್ಕೆ ಬರುತ್ತೆ' ಎಂದು ಹೇಳಿ ಬೆರಳಿಟ್ಟ ತಟ್ಟೆಗೆ—

* * *

ಆ ದಿನ ಚುನಾವಣೆ ಜ್ವರ ಕ್ಲಬ್ಬಿನಲ್ಲಿ. ಗಲಾಟೆಯೋ ಗಲಾಟೆ, ಸಂಭ್ರಮವೊ ಸಂಭ್ರಮ. ಜೇನು ಗೂಡಿನ ಹತ್ತಿರ ಇರುವಷ್ಟು ಗಲಭೆ, ಝೇಂಕಾರ, ಮಧುಪರ್ಕ. ಮೂಲೆಯಲ್ಲಿ ಕೊರವ ಒಬ್ಬನೇ ಹಳೇ ಪತ್ರಿಕೆಯನ್ನು ಓದುತ್ತ ಕುಳಿತಿದ್ದ. "ಯಾಕೆ? ಕೊರವ ಒಬ್ಬನೇ ಕೂತಿದ್ದಿ ಯಾರೂ ಚುನಾವಣೆಗೆ ಚಿತಾಪತಿ ಎಬ್ಬಿಸಲಿಲ್ಲವೇ ನಿನ್ನ" ಎಂದೆ.

'ಅರ್ಧ ಗಂಟೇಗೆ ಮುಂಚೆ ಸ್ವಲ್ಪ ಜನ ಬಂದು ನೀನೆ ಕಾರ್ಯದರ್ಶಿಯಾಗಬೇಕು ಎಂದರು, ಅಂಗಿಬಿಚ್ಚಿ ಒಳ ಜೇಬಿನಲ್ಲಿದ್ದ ಪಿಸ್ತೂಲು ತೋರಿಸಿದೆ. ಯಾರು ನನ್ನ ಹೆಸರನ್ನು ಸೂಚಿಸುತ್ತೀರೋ ಅವರ ಖೂನಿ ಇವತ್ತು ಎಂದೆ. ಹೆದರಿ ಹಿಂದೆ ಬಿದ್ದರು. ಈಗ ಸುಖವಾಗಿ ಈ ಕಾಗಕ್ಕನ ಕತೆ ಓದುತ್ತಾ ಇದ್ದೇನೆ ಎಂದ.

'ನಿನ್ನ ಕೆಲಸ ಮುಗಿಯಿತು. ನಾನಿನ್ನೂ ಸುರಕ್ಷಿತ ಅಲ್ಲ ದಯಮಾಡಿ ಒಂದು ಐದು ನಿಮಿಷ ಆ ಪಿಸ್ತೂಲು ಎರವಲು ಕೊಡ್ತೀಯಾ' ಎಂದೆ.

* * *

ಚಪ್ಪಲಿಯ ಬೆರಳುಂಗರವನ್ನು ಕುಟ್ಟುತಾ ಇದ್ದ ಆ ಕೊರವ ಮೆಟ್ಟಿಲು ಹತ್ತಿರ. ಏನಯ್ಯಾ! ಬಾಯಿಬಿಡತೇ ಚಪ್ಪಲಿ? ಎಂದೆ'. ಹ್ಞೂ ಕಣಯ್ಯಾ ಅದಕ್ಕೇ ತಕ್ಕ ಶಾಸ್ತಿಮಾಡ್ತಾ ಇದ್ದೇನೆ. "ಇದೇನಯ್ಯಾ! ನಿನ್ನೆತಾನೆ ರಿಪಬ್ಲಿಕ್ ಡೆ ಊರಲೆಲ್ಲಾ ಹಬ್ಬ. ಸರ್ವರಿಗೂ ಸ್ವಾತಂತ್ರ್ಯ. ನಿನ್ನ ಚಪ್ಪಲೀಗೆ ಬೇಡವೆ" ಎಂದೆ.

“ರಿಪಬ್ಲಿಕ್ ಡೇಗೆ ಬಾಯಿಬಿಡಲಿಲ್ಲ ಚಪ್ಪಲಿ—ಅವತ್ತು ಸ್ವಾತಂತ್ರ್ಯವನ್ನ ಆಚರಿಸೋಣ ಎಂದು ‘ಮಕಮಲ್ ಟೋಪಿ’ಗೆ ಹೋದೆ. ನಾಟಕಕ್ಕೂ ರಾಜಕೀಯಕ್ಕೂ ವ್ಯತ್ಯಾಸಕಾಣದೆ ಚಪ್ಪಲಿ ಉಂಗುರ ಬಾಯಿಬಿಡುತು” ಎಂದ.

ಪೋಲೀಸಿನವರು ಎಲ್ಲಾದರೂ ಇದಾರೋ ಅಂತ ಸುತ್ತಲೂ ನೋಡಿದೆ.

*   *   *

ಕಾಡು ಹರಟೇಗೆ ಹೊತ್ತಾಗುತ್ತಾ ಬಂದಿತ್ತು. ಪತ್ರಿಕೆ ಓದುಕ್ಕೆ ಬಿಡುವಿತ್ತಿಲ್ಲ, ಅದಕ್ಕಾಗಿ ಕೊರವನನ್ನ ಕೇಳಿದೆ ‘ಪತ್ರಿಕೆ ಓದಿದೆಯಲ್ಲಾ! ಕೊರಿಯಾ ಸುದ್ದಿ ಏನು. ಕಾಶ್ಮೀರ ಎಲ್ಲಿನ ತನಕ ಬಂತು’ ಎಂದು. ನನಗೆ ಓದುಕ್ಕೆ ಬೇಜಾರು. ಕಾಲವೂ ಇದ್ದಿಲ್ಲ.

ಕೊರವ ಅಂದ. ಕೊರಿಯಾ ಸಮಸ್ಯೆ ಮುಗಿಸಿದರೆ ಕಾಶ್ಮೀರ ಮುಗಿದಂತೆಯೇ! ಕೊರಿಯಾದಲ್ಲಿ ಆಕ್ರಮಣಕಾರರು ಹಿಂತಿರುಗಿದರೆ ನಾವೂ ಹಿಂತಿರುಗುತ್ತೇವೆ ಎಂದು ಚೀನಿಯರು. ಕೊರಿಯಾ ಶಾಂತಿಗಾಗಿ ದ. ಕೊರಿಯನ್ನರ ಆಹ್ವಾನದ ಮೇಲೆ ನಾವು ಬಂದಿದ್ದೇವೆ. ನಾವು ಆಕ್ರಮಣಕಾರರಲ್ಲ. ನೀವು! ಎಂದು ಅಮೇರಿಕನ್ನರು. ಕಾಶ್ಮೀರ ಕೂಡ ಹಾಗೇ ಅಲ್ಲವೇ! ನಾವು ಆಕ್ರಮಣಕಾರರು ಎಂದು ಪಾಕೀಸ್ಥಾನ. ಅವರು ಎಂದು ನಾವು. ಡಿಕ್ಸನ್ನರು ಏನೋ ಹೇಳಿದರು. ಆದರೆ ಕೇಳುವವರು ಯಾರು? ಕೊರಿಯಾ ಸಮಸ್ಯೆ ಮುಕ್ತಾಯವಾದರೆ. ಅದೇ ರೀತಿ ಕಾಶ್ಮೀರ ಮುಗಿಸಬಹುದು. ಇಷ್ಟೇ ತಾತ್ಪರ್ಯ ಎಂದ ಕೊರವ.

“ಅಂದರೆ ಅಲ್ಲಿ ಯುದ್ಧ ಶುರುವಾದರೆ ಇಲ್ಲೂ ಇದೇ ರೀತೀನೆ” ಎಂದೆ. ಹಸುಳೆಯ ಮೊಗ ತೋರಿಸಿದನೇ ಹೊರ್ತು ಕೊರವ—ಮಾತಾಡಲಿಲ್ಲ.



ಏಕೆ ಹೀಗೆ?

(೧) ನನಗೆ ದಿನವೂ ರಾತ್ರಿ ಹಗ್ಗದ ಕನಸು ಕಾಣುತ್ತಿದೆ, ಏಕೆ?

ಸ್ವಾಮಿ! ತಮ್ಮ ಕಸಬು ಏನು ಎಂದು ತಿಳಿಯದೆ, ಈ ಪ್ರಶ್ನೆಗೆ ಉತ್ತರ ಹೇಳುವುದು ಅಸಾಧ್ಯ. ತಾವು ಗುಮಾಸ್ತೆಯರಾದರೆ, ಹಗ್ಗಕ್ಕೊಂದು ಅರ್ಥ, (ಹಿಡಿದು ಹತ್ತುವ ವಸ್ತು) ಮಂತ್ರಿಯಾದರೆ ಒಂದರ್ಥ (ಬಿಗಿದು ಕಟ್ಟುವ ವಸ್ತು) ವಿವಾಹಿತರಾದರೆ ಒಂದರ್ಥ (ನೇಣಿಗುಪಯೋಗವಾಗುವ ಸಾಮಗ್ರಿ) ಅವಿವಾಹಿತರಾದರೆ ಒಂದರ್ಥ (ಹಸುವನ್ನು ಕಟ್ಟುವ ವಸ್ತು)—ಹೀಗೆ ತರತರದ ಅರ್ಥ ಉಂಟು ಅದನ್ನು ತಾವು ಖಚಿತವಾಗಿ ತಿಳಿಸುವವರೆಗೂ, ತಮ್ಮ ಕನಸಿನಲ್ಲಿ ಕಾಣಿಸುವ ಹಗ್ಗ ಶಾವಿಗೆಯ ಪ್ರತೀಕ ಎಂದು ತಿಳಿದು, ಸುಮ್ಮನಿರುವುದೇ ಮೇಲೆನಿಸುತ್ತದೆ.

(೨) ನನ್ನ ಮಗ ಹೆಬ್ಬೆಟ್ಟು ಚೀಪುತ್ತಿದ್ದಾನೆ, ಇದಕ್ಕೇನು ಪರಿಹಾರ?

ದ್ರೋಣಾಚಾರ್ಯ ಚಿಕಿತ್ಸೆ ಎಂಬ ಒಂದು ಕ್ರಮವಿದೆ, ಆತ ಏಕಲವ್ಯನಿಗೆ ನಡೆಸಿದ್ದು. ಅದಕ್ಕೆ ತಾವು ಸಿದ್ಧರಿಲ್ಲದಿದ್ದರೆ, ಮಗುವಿಗೆ ಸಿಗರೇಟ್ ಕಲಿಸಿ, ಸಿಗರೇಟ್ ಸಾಲದೆಂದು ಮಗು ಗಲಾಟೆ ಎಬ್ಬಿಸಿದರೆ, ಸಿಗಾರ್ ಎಂಬ ಒಂದು ಪದಾರ್ಥ ದೊರೆಯುತ್ತೆ, ಅಂಗಡಿಗಳಲ್ಲಿ, ಡಜನ್ನಿಗೆ ಐದು ರೂಪಾಯಿ.

(೩) ನನ್ನ ಕೂದಲುದುರಿ ನಾನು ಬಟ್ಟ ತಲೆಯವನಾಗುವುದಕ್ಕೂ ನನ್ನ ಸಂಸಾರ ತಾಪತ್ರಯಕ್ಕೂ ಏನಾದರೂ ಸಂಬಂಧವಿದೆಯೋ?

ಇಲ್ಲ. ಸಂಸಾರವೇ ಇಲ್ಲದೆ, ಒಂಟಿಯಾಗಿ ಆನಂದಪಡುವ ಅನೇಕರ ಹೊಳಪು ಬುರುಡೆಗಳನ್ನು ಪರೀಕ್ಷಿಸಿ. ನಮ್ಮನ್ನು ತುಳಿದು ಅನೇಕರು ಮೇಲು ಮೇಲಿನ ಗ್ರೇಡುಗಳಿಗೆ ಹತ್ತಿದರೆ, ಹೀಗಾಗುತ್ತದೆ. ಎಂದು ಹಲವರು ವಾದಿಸುತ್ತಾರೆ ಇದೂ ನಿಜವಲ್ಲ ಸಾಮಾನ್ಯವಾಗಿ ನಮಗೆ ಬಟ್ಟ ತಲೆ ಬರುವುದು ನಮ್ಮ ತಾತನಿಗೆ ಬಟ್ಟ ತಲೆ ಇದ್ದುದರಿಂದಲೇ. ಆದ್ದರಿಂದ, ತಾತನ ಕೂದಲು ಬೆಳೆಸುವ ಉಪಾಯ ಹುಡುಕಿ; ಇಲ್ಲದಿದ್ದರೆ, ತಾತನೇ ಇಲ್ಲದಹಾಗೆ ನಿಮ್ಮ ವಂಶವನ್ನು ಕಾಪಾಡಿಕೊಳ್ಳಿ.

(೪) ನನ್ನ ಮಗನನ್ನು ನಾನು ಎಷ್ಟು ಹೊಡೆದರೂ, ಅವನ ಕಣ್ಣಲ್ಲಿ ಕೊಂಚವೂ ನೀರು ಬರುವುದಿಲ್ಲವಲ್ಲಾ ಏಕೆ?

ಮೊದಲನೆಯದಾಗಿ, ಅವನು ನಿಮ್ಮ ಮಗ; ಹಸುಳೆಯ ಮೇಲೆ ಕೈ ಮಾಡುವಷ್ಟು ಕಲ್ಲೆದೆಯವರಾದ ನಿಮಗೆ ಹುಟ್ಟಿದ ಮಗನಿಗೆ ತೊಗಲಿನಷ್ಟು


ದಪ್ಪವಾದ ಚರ್ಮವಾದರೂ ಬೇಡವೆ? ಅವನ ಕಣ್ಣಲ್ಲಿ ನೀರು ಬರಬೇಕೆಂಬುದೇ ನಿಮ್ಮ ಆಶಯವಾದರೆ, ಕಣ್ಣನ್ನೇ ಕುಕ್ಕಬಾರದೇಕೆ? ಅಥವಾ, ಎಷ್ಟು ಹೊಡೆದರೂ, ನಿನ್ನ ಕಣ್ಣಲ್ಲಿ ಒಂದು ತೊಟ್ಟು ನೀರೂ ಬರುವುದಿಲ್ಲವಲ್ಲೋ, ಎಂದು ಅವನ ಮುಂದೇನೆ ಅಳಿ.

(೫) ನನ್ನ ಸ್ನೇಹಿತ ಒಬ್ಬ ಇದಾನೆ. ಅವನು ಎಲ್ಲಿ ಯಾರ ಕಿಸೆಯಲ್ಲಿ ಕಾಸು ಕಂಡರೂ, ಅದನ್ನು ಕದ್ದು ತರುತ್ತಾನೆ. ಉಳಿದೆಲ್ಲ ವಿಷಯಗಳಲ್ಲೂ ಅವನು ಗಣ್ಯ. ಈ ಅಭ್ಯಾಸವನ್ನು ಅವನು ತ್ಯಜಿಸುವಂತೆ ನಾವೇನು ಮಾಡಬೇಕು?

ಅವನು ನಿಜಕ್ಕೂ ರಾಜವಂಶದವನಿರಬೇಕು; ರತ್ನ ಹಾರೇತಿ ಪಾರ್ಥಿವಃ; ಎಂಬಂತೆ, ಎಲ್ಲಿ ರತ್ನಗಳನ್ನು ಕಂಡರೂ ಅದನ್ನು ಅಪಹರಿಸಿ ತಂದು ತನ್ನ ಖಜಾನೆಗೆ ಸೇರಿಸಬೇಕೆಂಬ ಆ ಹಿಂದಿನ ವಾಸನೆ ಅವನಲ್ಲಿ ಪ್ರಬಲವಾಗಿದೆ. ಅವನದು ದುರಭ್ಯಾಸ ಅಲ್ಲ; ನೆಪೋಲಿಯರ್ನ್ ಖಾಯಿಲೆ ಅಥವಾ ಚಕ್ರವರ್ತಿ ಜ್ವರ, ಅದಕ್ಕೆ ನಿವಾರಣೋಪಾಯ ನಾವೆಲ್ಲ ಕಿಸೆಯಲ್ಲಿ ಚೇಳುಗಳನ್ನು ತುಂಬಿಕೊಂಡು ಓಡಾಡುವುದೇ.

(ಮುಂದುವರಿಯುವುದು)

—ಪುಬ್ಬಯ್ಯ.



....ಹೀಗೆ ಹೊಡೆದಾ ನೋಡಿ ಆ ಪ್ರೊರೇಲ್ ಬಂದು ಸಿಕ್ಸರ್ ನಾ—
ಏನು ಅಮೋಘ! ಅಂತೀರಿ!!....

ಕಿಟ್ಟಿಯ ಲಾಂಡ್ರಿ

ಮಂತ್ರಿಗಳಿಗೆ ಅರ್ಜಿ ಬರೆಯುವುದು, ಮುನಿಸಿಪಾಲಿಟಿಯಲ್ಲಿ ಜಗಳ ಹಚ್ಚುವುದು, ಸಿಕ್ಕಿದ ವೇದಿಕೆಯಲ್ಲಿ ನಿಂತು ಭಾಷಣ ಮಾಡುವುದು ಇತ್ಯಾದಿ ಯಾವ ಕೆಲಸದಿಂದಲೂ ಹೊಟ್ಟೆ ತುಂಬುವುದಿಲ್ಲವೆಂದು ಅರಿತ ಕಿಟ್ಟಿ ಯಾವುದಾದರೂ ಹೊಸ ಉದ್ಯೋಗವನ್ನ ಕೈಕೊಳ್ಳಬೇಕೆಂದು ಯೋಚಿಸುತ್ತಲೇ ಇದ್ದ. ಚಿಲ್ಲರೆ ಅಂಗಡಿ ಇಡುವ ಫಜೀತಿ ಬೇಡವೆಂದು ನಿರ್ಧರಿಸಿದ್ದ. ಏಕೆಂದರೆ ಆತನ ಗೆಳೆಯ ಗೋವಿಂದ "ಗೋಕುಲ ಸ್ಟೋರ್ಸ್" ಎಂಬ ಅಂಗಡಿ ಇಟ್ಟು, ಇದ್ದ ಸಾಮಾನುಗಳನ್ನೆಲ್ಲಾ ಮನೆಗೆ ಮತ್ತು ಸಾಲ ಕೇಳುವವರಿಗೆ ಕೊಟ್ಟು ಕೈ ಮುಗಿದು ಅಂಗಡಿ ಮುಚ್ಚಿದ ದೃಷ್ಟಾಂತವನ್ನು ಕಣ್ಣಾರೆ ಕಂಡಿದ್ದ. ನೌಕರಿಗೆ ಸೇರಬೇಕೆಂದರೆ ಕೊಡುವವರು ಯಾರು? ಬಸ್ ಕಂಡಕ್ಟರನಾಗಬೇಕೆಂದರೆ ವ್ಹೈ ಬಗ್ಗಿ ದುಡಿಯಲು ಸಾಧ್ಯವೇ! ಹೀಗೆಲ್ಲಾ ಯೋಚನೆಮಾಡಿ, ಕೆಲಸವೂ ಸುಲಭವಾಗಿರಬೇಕು, ದುಡ್ಡೂ ಬರಬೇಕು ಈರೀತಿ ಇರುವ ಎರಡು ಉದ್ಯೋಗ ಮಾಡಬಹುದೆಂದು ಎಣಿಸಿದ್ದ. ಮೊದಲನೆಯದು "ಉದ್ಯೋಗ" ಅಂದರೆ ಕ್ಷೌರಿಕನ ಅಂಗಡಿ ತೆಗೆಯುವುದು. ಮತ್ತೊಂದು "ಲಾಂಡ್ರಿ" ಸ್ಥಾಪನೆ. ಹಜಾಮತಿಯ ಕೆಲಸಕ್ಕೆ ಕೈ ಚಳಕವೂ, ಸಂಸ್ಕಾರವೂ ಬೇಕಾದ್ದರಿಂದ ಆ ಯೋಜನೆಯನ್ನು ಬಿಟ್ಟು ರಜಕನಾಗುವುದೇ ಸರಿ ಎಂದು ನಿರ್ಧರಿಸಿದ.

"ರಜಕ" ಎಂದರೆ ಎಲ್ಲ ಅಗಸರ ಹಾಗೆ ಸದಾ ಸುಳ್ಳು ಹೇಳಿಕೊಂಡು. ನಾವು ಕೊಟ್ಟ ಬಟ್ಟೆಯನ್ನು ಕಡೆಯ ಪಕ್ಷ ಒಂದು ವಾರವಾದರೂ ಧರಿಸಿ ಕೊನೆಗೆ ಮೊದಲಿದ್ದುದಕ್ಕಿಂತ ಹೆಚ್ಚು ಕೊಳೆ ಮಾಡಿ ತರುವ ಈಗಿನ ಅಗಸರಂತೆ ಇರಲು ಕಿಟ್ಟಿ ಇಷ್ಟಪಡಲಿಲ್ಲ. "ಈ ವೃತ್ತಿಯಲ್ಲಿ ಕ್ರಾಂತಿಯುಂಟುಮಾಡುತ್ತೇನೆ" ಎಂದುಕೊಂಡೇ ಕೆಲಸ ಪ್ರಾರಂಭಿಸಿದ ಮಾರ್ಕೆಟ್ ಚೌಕದಲ್ಲಿಯೇ ಒಂದು ಒಳ್ಳೆಯ ಮನೆ ಹಿಡಿದು "ಮಹಾತ್ಮಾ ವಾಷಿಂಗ್ ಕಂ" ಎಂಬ ದೊಡ್ಡ ಬೋರ್ಡು ತಗುಲಿಸಿದ.

ಕಿಟ್ಟಿಯ ಕಂಪೆನಿ ಬಂದಮೇಲೆ ನಿಜವಾಗೂ ಈ 'ರಜಕ'ರ ಉದ್ಯೋಗದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಆದುವು. ಬಟ್ಟೆ ಕೊಟ್ಟುದಕ್ಕೆ ತೆಗೆದು

ಕೊಂಡದ್ದಕ್ಕೆ 'ಪಾಸ್ ಬುಕ್ಕು'ಗಳು ಬಂದವು. ಇಷ್ಟನೇ ತಾರೀಖು ಇಷ್ಟನೇ ಘಂಟೆಯಲ್ಲಿ ನಿಮ್ಮ ಬಟ್ಟೆಗಳು 'ರೆಡಿ' ಇರುವುವು ಎಂದರೆ ಅದೇ ಸಮಯಕ್ಕೆ ಸಿದ್ಧವಾಗಿರುತ್ತಿದ್ದುವು. 'ಕಂಪನಿ'ಯಲ್ಲಿ ಆಫೀಸು ರೂಮನ್ನು ಬೇರೆ ತೆಗೆದಿದ್ದನು. ಎಲ್ಲ ವ್ಯವಹಾರವೂ ಪತ್ರಗಳ ಮುಖಾಂತರ ನಡೆಯತಕ್ಕದೆಂದು ನಿರ್ಧರಿಸಿ ಅದನ್ನ ನಡೆಸಲು ಇಬ್ಬರು ಗುಮಾಸ್ತರನ್ನು ಬೇರೆ ಇಟ್ಟಿದ್ದ.

ಬಟ್ಟೆಗಳಿಗೂ ನಂಬರುಗಳನ್ನು ಕೊಟ್ಟಿದ್ದ. ಅಲ್ಲದೆ ತನ್ನ ಗಿರಾಕಿಗಳಿಗೂ ನಂಬರುಗಳನ್ನು ಕೊಟ್ಟು, ಪತ್ರ ವ್ಯವಹಾರದಲ್ಲೆಲ್ಲಾ ಅದನ್ನು ನಮೂದಿಸಬೇಕೆಂದೂ, ತಿಳಿಸಿದ್ದ. ನನಗೆ Rd ಎಂತಾ ನಂಬರು ಬಂದಿತ್ತು ಏನಿದು Rd ಎಂತಾ ನೀವು ಸಹಜವಾಗಿ ಕುತೂಹಲಿಗಳಾಗಬಹುದು. 'ರ' ನಿಂದ ಪ್ರಾರಂಭವಾಗುವವರನ್ನೆಲ್ಲಾ ಒಂದು ಕಡೆ ಸೇರಿಸಿ ಅವರಿಗೆಲ್ಲಾ A.B.C.D. ಹೀಗೆ ಹೆಸರಿಡುತ್ತಾ ಹೋಗುವುದು. ಪ್ರಾರಂಭವಾಗುವ ಹೆಸರಿನವನ ಪೈಕಿ ನಾನು ನಾಲ್ಕನೆಯವನಾಗಿದ್ದೆ. ಆದ್ದರಿಂದಲೇನ್ನು ಹೆಸರು Rd ಯಾಗಿತ್ತು. ಇನ್ನು ನನ್ನ ಬಟ್ಟೆಗಳಿಗೆ Rd 'ರ', Rd 2. ಹೀಗೆ ನಂಬರು ಬಿದ್ದಿತು

'ಒಳ್ಳೆಯ ವ್ಯವಸ್ಥೆ' ಎಂದುಕೊಂಡು ನನಗೆ ಪರಿಚಿತರಿಗೆಲ್ಲ ಕಿಟ್ಟಯ ಕಂಪನಿಗೆ ಬಟ್ಟೆ ಕೊಡಬೇಕೆಂದು ಪ್ರೋತ್ಸಾಹಿಸುತ್ತಿದ್ದೆ.

ಒಂದು ದಿನ ನಮ್ಮ ಮನೆ ಪಕ್ಕದಲ್ಲಿ ವಾಸವಾಗಿದ್ದ ಶಂಕರರಾಯರು ಒಂದು ಫೈಲನ್ನು ಕೈಯಲ್ಲಿ ಹಿಡಿದುಕೊಂಡು ನಮ್ಮ ಮನೆಯೊಳಕ್ಕೆ ಧಾವಿಸಿದರು. "ಏನ್ರೀ ರಾಯರೇ ಒಳ್ಳೆಯ ಕಂಪನಿ ಕಡೆ ಕೈ ತೋರಿಸಿದಿರಿ. ಏನೋ ನಿಮ್ಮ ಸ್ನೇಹಿತರು ರಜಕರಾದರೆ ನೀವಂತೂ ಬಟ್ಟೆ ಕೊಡುವುದು ಸರಿ. ನಮಗೆಲ್ಲಾ ಯಾಕೆ ತಂದಿಟ್ಟಿರಿ ಈ ತೊಂದರೇನ" ಎಂದು ಹಾರಾಡಿದರು.

"ಏನು ಸ್ವಾಮಿ ಇದು. ನಮ್ಮ ದೇಶಕ್ಕೆ ಮಾದರಿಯಾಗಿ ನಡೆಸುತ್ತಿದಾನೆ ಲಾಂಡ್ರೀನ. ಅವನ ಮೇಲೆ ಏನು ನಿಮ್ಮ ದೂರು" ಎಂದು ಕೇಳಿದೆ.

"ದೂರೇ ? ಇಲ್ಲಿ ನೋಡಿ ಈ ಫೈಲನ್ನು" ಎಂದು ತೆಗೆದು ನನ್ನ ಮುಂದೆ ಇರಿಸಿದರು "ಯಾರು ಸ್ವಾಮಿ, ಈ ನಂಬರು, ತಾರೀಖು ಜ್ಞಾಪಕ ಇಟ್ಟುಕೊಳ್ಳುವುದು" ಎಂದು ರೇಗಾಡಿದರು. ವಿಷಯ ಏನು ಎಂದು ತಿಳಿಯಲು ಫೈಲನ್ನು ಬಿಚ್ಚಿದೆ ಸುಮಾರು ೨೦ ಕಾಗದ ಕಿಟ್ಟಯ ಕಂಪನಿಯಿಂದ ಬಂದಿದ್ದನ್ನು ಜೋಡಿಸಿಟ್ಟಿದ್ದರು.

ಅದರಲ್ಲಿ ಒಂದೆರಡು ಕಾಗದವನ್ನು ಮಾತ್ರ ತಮ್ಮ ಅವಗಾಹನೆಗಾಗಿ ಇಡುತ್ತೇನೆ.

ಶಂಕರರಾಯರಿಗೆ, ೧೦-೧೦-೪೯.

ನೀವು ನಿಮ್ಮ ಪತ್ನಿಯ ಸಿಲ್ಕ್ ಬ್ಲಾವುಜ್ ಹರಿದಿತ್ತೆಂದು ತಿಳಿಸಿದ ರ. ನಂ. ಇಲ್ಲ. ತಾ|| ೬-೧೦-೪೯ರ ಕಾಗದ ತಲುಪಿತು. ಈ ಹಿಂದೆಯೇ ನಾಲ್ಕು ಕಾಗದ ಬರೆದಿರುವೆನೆಂದು ನೀವು ತಿಳಿಸಿದರೂ ಅವುಗಳ ರೆಫರೆನ್ಸ್ ನೀವು ತಿಳಿಸಿಲ್ಲವಾದ್ದರಿಂದ ನಮ್ಮಲ್ಲಿ ದಾಖಲು ತಿಂಗಳು ಸಿಕ್ಕುವಹಾಗಿಲ್ಲ. ಅಲ್ಲದೆ ನೀವು ನಿಮ್ಮ ನಂಬರನ್ನೂ ಬಟ್ಟೆಯ ನಂಬರನ್ನು ನಮೂದಿಸಿಲ್ಲವಾದ್ದರಿಂದ ಈಗ ಏನೂ ಮಾಡಲಾಗುವುದಿಲ್ಲ. ಪುನಃ ಎಲ್ಲ ವಿವರ ತಿಳಿಸಿ ಬರೆದರೆ ವಿಚಾರ ಮಾಡಲಾಗುವುದು.

ಗೌಡಯ್ಯ, ಕಂಪನಿಯ ಪರವಾಗಿ.

Seಗೆ, ೧-೧-೫೦

ನಿಮ್ಮ ೨೦/೪೯-೫೦, ೨೫-೧೨-೫೦ರ ಕಾಗದ, ೨೦-೧೨-೪೯ ರಲ್ಲಿ ನಡೆದ ಕಂಪನಿ ಮೀಟಿಂಗ್‌ನಲ್ಲಿ ಆದ ನಿರ್ಣಯ ನಂ. 10-12-B 49 Read with 30-e-49 Confirming 7/49 over ruling 3/49-B-50-Se 5 ಪ್ರಕಾರ ಸಾಕಷ್ಟು ಸಾಕ್ಷಿಗಳು ದೊರೆಯದ್ದರಿಂದ ಏನೂ ಪರಿಹಾರ ಕೊಡಲಾಗುವುದಿಲ್ಲವೆಂದು ತೀರ್ಮಾನವಾಯ್ತು.

ಕಂಪನಿಯ ಪರವಾಗಿ.

ನಾನು ಫೈಲಲ್ಲಿ ಮುಖವನ್ನಿಟ್ಟು ಓದುತ್ತಿದ್ದಾಗ ಶಂಕರರಾಯರು ಕೆಂಗಣ್ಣಿನಿಂದ ನನ್ನನ್ನೇ ನೋಡುತ್ತಿದ್ದರು. ಮೇಲ್ಕಂಡ ಕಾಗದ ನಾನು ಓದಿದ ಮೇಲೆ ಈ ಮಹಾ ಪ್ರಾಣಿಯಿಂದ ಹೇಗೆ ಬೈಗಳ ತಪ್ಪಿಸಬೇಕೆಂದು ಯೋಚನೆಯಾಯ್ತು. ಹಾಗೆ ಫೈಲಿನಲ್ಲೇ ನಿಗ ಇಟ್ಟು ಬ್ಯಾಗಲೆ ಅಡಿಗೆ ಮನೆಯಲ್ಲಿದ್ದ ಆಕೆಯನ್ನು ಕೂಗಿ 'ಏ....ಎರಡು ಕಪ್ಪು ಕಾಫಿ ತಗೊಂಬಾ' ಎಂದೆ.

ಕಾಫಿ ಕುಡಿಸಿದರೂ ಆ ಮನುಷ್ಯನನ್ನ ಸಮಾಧಾನ ಮಾಡಿ ಕಳುಹಿಸಲು ಸಾಕುಸಾಕಾಗಿ ಹೋಯ್ತು ನನಗೆ.

ಕಿಟ್ಟಿಯನ್ನು ಹುಡುಕುತ್ತಿದ್ದೇನೆ ಚೆನ್ನಾಗಿ ಬೈಯೋಣ ಅಂತ. ಸಿಕ್ಕಿಲ್ಲ ಇನ್ನೂ.

— ಹಾ. ರಾ

— o —

ಅಧ್ಯಕ್ಷರ ಆಯ್ಕೆ !

(೧)

ಶ್ರೀಮಾನ್ ವಿಶ್ವರೂಪಯ್ಯನವರಿಗೆ ಹೆಚ್. ಹೆಚ್. ಹುಚ್ಚೂರಾವ್ ಮಾಡುವ ವಿಜ್ಞಾಪನೆಗಳು. ಗಾಂಧಿ ಭಾವಚಿತ್ರದ ಅನಾವರಣೋತ್ಸವಕ್ಕೆ ಅಧ್ಯಕ್ಷತೆ ವಹಿಸಲು ನೀವು ಸೂಚಿಸಿರುವ ಮೂವರು ಮಹನೀಯರ ಪೈಕಿ ಯಾರನ್ನ ಅನುಮೋದಿಸೋಣ ಎಂಬುದೇ ನನಗೆ ಒಂದು ಭಾರಿ ಸಮಸ್ಯೆ ಯಾಗಿದೆ! ಗುಂಡೂರಾಯರನ್ನೇ ಒಪ್ಪಿಸಿ ಎಂದು ಬರೆಯುವುದಕ್ಕೂ ನನಗೆ ಧೈರ್ಯ ಸಾಲದು. ಶಿಡ್ಲಘಟ್ಟದ ಖೂನಿಕೇಸಿನಲ್ಲಿ ಅವನ ವಿಚಾರಣೆ ಇನ್ನೂ ಮುಗಿದಿಲ್ಲ! ಹೋಗಲಿ, ಆ ಪೊಲೀಸ್ ಇನ್‌ಸ್ಪೆಕ್ಟರ್ ನರಸಿಂಹಯ್ಯನೇ ಆಗಲಿ ಎಂದರೆ ಅವನು ಆ ತುಂಬಿದ ಸಭೆಯಲ್ಲಿ 'ಸತ್ಯ ! ಅಹಿಂಸೆ !' ಅಂತ ಪ್ರಾರಂಭಿಸಿಬಿಟ್ಟರೆ ಮುಂದಿನ ಸೀಟುಗಳಲ್ಲಿ ಕುಳಿತುಕೊಳ್ಳುವ ನಾವು ಅದನ್ನೆಲ್ಲ ಕೇಳುತ್ತ ತೆಪ್ಪಗೆ ಕೂರುವುದು ಹೇಗೆ? ವೈಸ್ ಪ್ರೆಸಿಡೆಂಟ್ ವೆಂಕಟಾಚಲಯ್ಯನ ಹೆಸರನ್ನ ನೀವು ಪಟ್ಟಿಯಲ್ಲಿ ಸೇರಿಸಿದ್ದೇ ಮಹಾ ಪಾಪ! ನಗರದ ಪಿತೃ ಎಂದು ಸೇರಿಸಿದಿರಿ! ಮೊದಲು ಆ ಹೆಸರಿಗೆ ತರ್ಪಣ ಕೊಟ್ಟುಬಿಡಿ! ಜನ ಏನೆಂದುಕೊಂಡಾರು. ಪಾನನಿರೋಧ ನಮ್ಮ ಜಿಲ್ಲೆಯಲ್ಲಿ ಜಾರಿಯಲ್ಲಾದರೂ ಇದ್ದಿದ್ದರೆ ಜನರನ್ನು ಹೇಗೋ ಒಪ್ಪಿಸಬಹುದಾಗಿತ್ತು! ಈಗ ಅದೂ ಸಾಧ್ಯವಿಲ್ಲ. ಮುಖ್ಯವಾಗಿ ಯೋಚಿಸಿ ಅಧ್ಯಕ್ಷರನ್ನು ಚುನಾಯಿಸಿ.

—ಇತಿ, ನಿಮ್ಮ ಹಿತಚಿಂತಕ,
ಹೆಚ್. ಹೆಚ್. ಹುಚ್ಚೂರಾವ್.

(೨)

ಶ್ರೀಮಾನ್ ವಿಶ್ವರೂಪಯ್ಯನವರಿಗೆ ಹಿರಿಯ ಸದಸ್ಯ ಲಕ್ಷ್ಮಣರಾಯನ ವಿಜ್ಞಾಪನೆಗಳು. ಅನಾವರಣೋತ್ಸವದ ಏರ್ಪಾಟು ಮಾಡಿರುವುದು ಶ್ಲಾಘನೀಯವಾದರೂ, ಆಹ್ವಾನದ ಜೊತೆಯಲ್ಲೇ ಚಂದಾ ಪಟ್ಟಿ ಕಳಿಸಿರುವುದನ್ನ ನೋಡಿದರೆ ನೀವು ಎಂತಹ ಬಂಡರು ಎಂಬುದು ಗೊತ್ತಾಗುತ್ತೆ. ನೀವು ಚಂದ ವಸೂಲಿಗೆಂದು ಕಳಿಸಿದ್ದ ಹುಡುಗನಿಗೆ ಎರಡು ಒದೆ ಕೊಟ್ಟು ಕಳಿಸಿದೆ. ಇನ್ನು ಮುಂದೆ ಚಂದ ವಸೂಲಿಗೆ ನೀವೆ ಬನ್ನಿ! ಆದರೆ ಒಂದು ವಿಚಾರ ಮಾತ್ರ ಜ್ಞಾಪಕದಲ್ಲಿಟ್ಟುಕೊಳ್ಳಿ! ಈ ಊರಿನ ಯಾವ ಮಹನೀಯನ ಕೊರಳಿಗೂ ಹಾರ ಹಾಕುವುದಿಲ್ಲವೆಂದು ನೀವು ಭರವಸೆ ಕೊಟ್ಟರೆ ಮಾತ್ರ ನಾನು ಚಂದಾ

ಕೊಡಲು ಸಿದ್ಧ! ಈ ಸಲ ಅಧ್ಯಕ್ಷರನ್ನ ಖಂಡಿತ ಬೇರೇ ಊರಿನಿಂದಲೇ ಹಿಡಿದುಕೊಂಡು ಬನ್ನಿ. ಕಡೆಗೆ ಒಬ್ಬ ನಿರಾಶ್ರಿತ ಸಿಕ್ಕಿದರೂ ಸರಿಯೇ! ಅವನು ಯಾವ ಭಾಷೆಯಲ್ಲಿ ಬೇಕಾದರೂ ಭಾಷಣ ಮಾಡಲಿ! ಮುಖ್ಯವಾಗಿ ಅವನು ಹೇಳುವುದು ನಮಗೆ ಅರ್ಥವಾಗದಿದ್ದರೆ ಸರಿ!

ಇತಿ, ನಿಮ್ಮ ಅವಿಧೇಯ,

ಎಂ. ಟಿ. ಲಕ್ಷ್ಮಣರಾಯ.

(೩)

ಶ್ರೀಮಾನ್ ವಿಶ್ವರೂಪಯ್ಯನವರಿಗೆ ವಿಜ್ಞಾಪನೆಗಳು. ಅನಾವರಣೋತ್ಸವಕ್ಕೆ ಪುರಪ್ರಮುಖನೂ, ಸಭ್ಯನೂ ಆದ ನನ್ನನ್ನೇ ಅಧ್ಯಕ್ಷರನ್ನಾಗಿ ಮಾಡುತ್ತೀರಾಗಿ ನಂಬಿರುತ್ತೇನೆ. ನೀವು ಈ ಸಾರಿ ಲೌಡ್ ಸ್ಪೀಕರ್ ವ್ಯವಸ್ಥೆ ಕೂಡ ಮಾಡಬೇಕಿಲ್ಲ. ಸುಮಾರು ೨೦೦ ಅಡಿ ಸುತ್ತಳತೆಯಲ್ಲಿ ಎಲ್ಲರಿಗೂ ಕೇಳಿಸುವಂತೆ ಕಿರುಚುವುದನ್ನು ಕಲಿತಿದೇನೆ. ಲೌಡ್‌ಸ್ಪೀಕರ್ ತರಿಸಲು ತಗುಲುವ ವೆಚ್ಚವೂ ನಿಮ್ಮ ಸಂಘಕ್ಕೆ ಉಳಿಯುತ್ತೆ. ಆ ಹಣವನ್ನು ಹಾರಕ್ಕೆ ಉಪಯೋಗಿಸಿಕೊಳ್ಳಬಹುದು! ಎಂದಿನಂತೆ ನಾನು ಭಾಷಣದ ಮಧ್ಯೆ ನಿಮ್ಮ ಕಾರ್ಯದಕ್ಷತೆಯನ್ನೂ, ನಿಸ್ವಾರ್ಥ ಸೇವೆಯನ್ನೂ ಸುಮಾರು ಅರ್ಧ ಗಂಟೆ ಕಾಲ ಅಥವ ನೀವು ಸಾಕು ಎನ್ನುವವರೆಗೂ ಕೊಂಡಾಡುತ್ತೇನೆ. ನಿಮ್ಮ ಇಷ್ಟಾನುಸಾರ ಸುಳ್ಳು ರಶೀತಿಗಳ ಪ್ರಸ್ತಾಪ ಎತ್ತುವುದಿಲ್ಲ! ಭಗವಂತನು ನಿಮಗೆ ಸದ್ಬುದ್ಧಿಯನ್ನು ದಯಪಾಲಿಸಲಿ.

ಇತಿ, ನಿಮ್ಮ ಶ್ರೇಯೋಭಿಲಾಶಿ,

ಭೀಮಪ್ಪ,

ಮಾಜಿ ಆರ್. ಎ. ಮೆಂಬರು.

(೪)

ಅನಾವರಣೋತ್ಸವಕ್ಕೆ ಪರಸ್ಥಳದಿಂದ ಅಧ್ಯಕ್ಷರನ್ನು ಕರತರುವುದು ಸ್ಥಳದಲ್ಲಿರುವ ನನ್ನಂಥ ಮಹನೀಯನ ಮುಖಕ್ಕೆ ಮಸಿ ಬಳಿದು ಟೋಪಿ ಹಾಕಿದಂತಾಗುವುದಿಲ್ಲವೆ? ನಮ್ಮೂರಿನ ಸಭಿಕ ವೃಂದದ ಯೋಗ್ಯತೆಗೆ ಹೊಂದಿಕೊಂಡು ಭಾಷಣ ಮಾಡುವುದು ನನಗೆ ಗೊತ್ತೇ ಹೊರತು ಪರಸ್ಥಳದಿಂದ ಬಂದವನಿಗೆ ಏನು ಗೊತ್ತಿರುತ್ತೆ! ನಾನು ಭಾಷಣಕ್ಕೆ ನಿಂತಾಗ ಪ್ರಾರಂಭವಾಗುವ ಚಪ್ಪಾಳೆಗಳು ನಾನು ಭಾಷಣ ಮುಗಿಸಿ ಕೂರುವವರೆಗೂ ನಿಲ್ಲುವುದೇ ಇಲ್ಲ! ಇಷ್ಟೇ ಸಾಲದೆ ನನ್ನ ವಾಕ್ ಪ್ರತಿಭೆಗೆ ನಿದರ್ಶನ! ಭಾಷಣಮಾಡುವಾಗ ಸ್ವಲ್ಪ ಸುಳ್ಳು ಸೇರಿಸಬೇಕು, ನಿಜ! ಗೊತ್ತಿಲ್ಲದ ವಿಚಾರಗಳನ್ನು ಗೊತ್ತಿವೆ ಎನ್ನುವಹಾಗೆ ಹೇಳ

ಬೇಕು, ನಿಜ! ನಾನು ಹಾಗೆ ಮಾಡುವುದಿಲ್ಲವೆಂದು ಹೇಳಿದೇನೆಯೆ? ಈಗಲೂ ಕಾಲ ಮಿಂಚಿಹೋಗಿಲ್ಲ. ನಿಮ್ಮ ಆಹ್ವಾನವನ್ನೇ ಎದುರು ನೋಡುತ್ತಿರುವ

ಜಿ. ವೆಂಕೋಜಿ,

ಸ್ಥಳೀಯ ಸಭ್ಯ ಅಧ್ಯಕ್ಷ

(೫)

ವಿಶ್ವರೂಪಯ್ಯನವರಿಗೆ ಭಾಷಣ, ಭೂಷಣ, ಅಧ್ಯಕ್ಷಕೇಸರಿ ಇತ್ಯಾದಿ ಬಿರುದಾಂಕಿತ ಭದ್ರಯ್ಯನ ವಿಜ್ಞಾಪನೆಗಳು

ಅನಾವರಣೋತ್ಸವಕ್ಕೆ ಅಧ್ಯಕ್ಷರನ್ನು ಗೊತ್ತುಮಾಡುವ ವಿಚಾರದಲ್ಲಿ ನೀವು ನಿನ್ನೆ ಸೋಮಪ್ಪನೊಂದಿಗೆ ನನ್ನ ವಿಚಾರ ಪ್ರಸ್ತಾಪ ಮಾಡಿದರೆಂದು ತಿಳಿಯಿತು. ನಿಮ್ಮ ಮನಸ್ಸಿನಲ್ಲಿರುವ ಅನುಮಾನಗಳು ತುಂಬಾ ಕೀಳು ದರ್ಜೆಯವು. ನನ್ನ ಭಾಷಣ ಮುಗಿದ ಮೇಲೂ ಸಭಿಕರು ಏಳುವುದೇ ಇಲ್ಲ! ನಾಲ್ಕಾರು ಕಡೆ ಹೀಗೆ ಆಗಿದೆ! ಸಭಿಕರ ಹಾವ ಭಾವಗಳಿಗೆ ತಕ್ಕಂತೆ ನಾನು ಭಾಷಣದ ವಿಶಯವನ್ನು ಬದಲಾಯಿಸುವುದೇ ಇದಕ್ಕೆ ಕಾರಣ! 'ನನ್ನ ಭಾಷಣ ಮುಗಿಯಿತು'—ಎಂಬುದು ಸಾಮಾನ್ಯವಾಗಿ ಸಭಿಕರಿಗೆ ಗೊತ್ತಾಗುವುದಿಲ್ಲವಾದುದರಿಂದ ನೀವು ನಾಲ್ಕೈದು ಹುಡುಗರನ್ನು ಬಿಟ್ಟು ಸನ್ನೆ ಮೂಲಕ ಚಪ್ಪಾಳೆ ಹೊಡೆಸುವುದು ಒಳ್ಳೆಯದು. ಆದರೆ ಅವರು ಕಡೆಯತನಕ ಎಚ್ಚರವಾಗಿರುವಂತೆ ನಿಗ ತೆಗೆದುಕೊಳ್ಳಬೇಕು.

ಇತಿ, ನಿಮ್ಮ ವಿಶ್ವಾಸಿ,

ಬಿ. ಡಿ ಭದ್ರಯ್ಯ.

(೬)

ಶ್ರೀಮಾನ್ ವಿಶ್ವರೂಪಯ್ಯನವರಿಗೆ ವಿಜ್ಞಾಪನೆಗಳು. ಈ ಸಲವೂ ಭೀಮಪ್ಪನನ್ನೇ ಅಧ್ಯಕ್ಷನನ್ನಾಗಿ ಮಾಡುತ್ತೀರೆಂತ ತಿಳಿಯಿತು. ಹೋದ ವರ್ಷ ತಾಲ್ಲೂಕ್ ಸಮ್ಮೇಳನದಲ್ಲಿ ಅವನು ಭಾಷಣಮಾಡಿ ಖೂನಿಯಾಗದೆ ಹಿಂದಿರಿಗಿದ್ದೇ ಅವನ ಪುಣ್ಯ! ಭೀಮಪ್ಪನಿಗಿಂತಲೂ ಯೋಗ್ಯರು ಯಾರೂ ನಿಮಗೆ ಸಿಕ್ಕದೆ ಇದ್ದರೆ, ಪಾಪ! ನೀವೇನು ಮಾಡುತ್ತೀರಿ, ನೆಟ್ಟಗೆ ನನ್ನ ಮನೆಗೇ ಬನ್ನಿ! ನನಗೂ ಒಂದು ತರಹ ಆಶೆ ಇದ್ದೇ ಇದೆ, ಸಾರ್ವಜನಿಕ ಭಾಷಣ ಅಂದರೆ! ಸಭಿಕರನ್ನು ಒದಗಿಸುವ ಜವಾಬ್ದಾರಿ, ಹೂವಿನಹಾರ ಮತ್ತು ಪೆಟ್ರೋಮ್ಯಾಕ್ಸ್ ಖರ್ಚನ್ನು ನಾನೇ ವಹಿಸಿಕೊಳ್ಳುತ್ತೇನೆ.

ಇತಿ, ನಿಮ್ಮ ಅತ್ಯಂತ ವಿಧೇಯ,

ಹನುಮಂತಯ್ಯ, ಸಾರ್ವಜನಿಕ ಸೇವಾಕಾಂಕ್ಷಿ.

—ಹಾ ಡಾ

[ಅಯ್ಯೋ! ದೇವರೇ! ನಮ್ಮನ್ನು ಕರೆದಿದ್ದಾರಲ್ಲ! ಅಧ್ಯಕ್ಷತೆಗೆ!]—ಸಂ.

ಬಾಯಿಲ್ಲ

(ಕಾಂಬೋಧಿ . ಝಂಪೆ)


ಕನ್ನಡಕೆ ಬಾಯಿಲ್ಲವಯ್ಯ
ಆನಂತ ಅವರಿವರು ಎನ್ನೊಳಗೆ ಇರಲಿಕ್ಕೆ ॥ ಪ ॥

ಆ ಮೋಹ, ಈ ಮೋಹ, ಜನನಿ ಜರಿಯುವ ಮೋಹ,
ವ್ಯಾಮೋಹ, ಪರಕೀಯ ರಾಜಮೋಹಾ ॥
ಷಾಮೋಹ, ಪೋಮೋಹ, ಕೋಲರಿಜ್ಜನ ಮೋಹ
ಉಸಿರಾದ ನಿನ್ನ ನಾ ಮರೆತೆನೊ, ತಾಯಿ ॥ ॥ ೧ ॥

ಹಿಂದಿ ಮದ, ಗಂಗ ಮತ, ಅಖಿಳ ವೈಭವದ ಮದ
ಮುಂದೆ ತನಗೇ ಹಳ್ಳ, ಡಿಲ್ಲಿ ಮದವೋ ॥
ತನ್ನ ಏಬೀಸೀಡಿ, ಕೆಂಪು ನುಡಿಯಲಿ ಮುಳುಗೆ
ಇನ್ನು, ಇಲ್ಲೀ ನಿಲಿಸಿ, ಮೆರೆವ ಮದದಿಂದ ॥ ೨ ॥

ಇಷ್ಟು ಜರುಗಿದರೆ, ಮತ್ತಷ್ಟು ನೂಕೆಂಬಾಸೆ
ಅಷ್ಟು ಸರಿದರೂ, ಮತ್ತಷ್ಟರಾಸೆ ॥
ನಷ್ಟ ನಂತಾಯಿ ಭಾಷೆ, ಬಿಡು, ಸುಖವ ಕಾಂಬಾಸೆ
ಕಷ್ಟ ಕನ್ನಡ ಭಾಷೆ, ಕಂಡವರ ನಡುವೆ ॥ ೩ ॥

—ವಿಟ್ಮಲ್.



"ಆ ಉಪ್ಪು ದಂಡವಾಗುತ್ತಲ್ಲಾ—ಇನ್ನೊಂದು ಸಾರಿ
ಮಜ್ಜಿಗೆ ಅನ್ನ ಕಲೆಸಿಕೊಳ್ಳಲೇನಮ್ಮಾ ?"

ನಾಣಿ ಕಲ್ಯಾಣ

ಗೋಣು ಬಗ್ಗಿಸಿದ ನಾಣಿ ನೇಣುಹಾಕಿಕೊಂಡವನ ಮೋರೆ ಹಾಕಿ ಹಜಾರದಲ್ಲಿ ಕಾಲಿಟ್ಟ 'ಅಯ್ಯೋ ಪಾಪ' ಎಂದೆನ್ನಿಸುವ ನೋಟ ಹುಡುಕಬೇಕಲ್ಲಾ ಎಂದು ಹುಡುಕಿ ತೆಗೆದು ಅರಿಶಿನ ಹಚ್ಚಿದ ಲಕೋಟೆಯನ್ನು ಕೈಗೆಕೊಟ್ಟ ಚಾಪೆಯ ಮೇಲೆ ಕೂತ. ಏನು ಹೇಳಲೂ ತೋಚದ ಹಲ್ಲು ಮುರಿದ ತೋಳನಂತೆ ಏನೋ ಹೇಳಲು ಹೊರಟು ತೊದಲಿ ತೆಪ್ಪಗೆ ಮುದುಡಿ ಗೋಣು ಬಗ್ಗಿಸಿ ಚಾಪೆಯ ಕಡ್ಡಿಯನ್ನು ಎಳೆದು ಪೀಡಿಸ ತೊಡಗಿದ.

ಕೈಗಿತ್ತ ಲಗ್ನಪತ್ರಿಕೆ ಓದ ತೊಡಗಿದೆ. "ಆದಿತ್ಯಾದಿ ಗೃಹೆಸರ್ವೆ" ಇಂದ ಪ್ರಾರಂಭವಾಗಿ ಇದೇ ಭಾನುವಾರ ಎರಡು ಘಂಟೆಗೆ ಸಲ್ಲುವ ಬಕರ ಲಗ್ನದಲ್ಲಿ ನನ್ನ ತಮ್ಮ ಆನೇಕಲ್ ಲಕ್ಷ್ಮಯ್ಯ ಬಿನ್ ಲಚ್ಚನ ಮಗ ಚಿ|| ನಾರಾಯಣಪ್ಪನೆಂಬ ವರನಿಗೆ ಹಳೇ ಅಗ್ರಹಾರದ ಶಾನುಭೋಗ ಗುರುರಾಯನ ಪುತ್ರಿ ಚಿ|| ಸೌ|| ಹ|| ಕುಂ|| ತಾರಾಮಣಿ ಎಂಬ ಕನ್ಯೆಯನ್ನು ಕೊಟ್ಟು ವಿವಾಹ ಮಹೋತ್ಸವವನ್ನು ಹರಿಕೆರೆ ಆನಂದರಾಯರ ಹನುಮಂತ ದೇವರ ಗುಡಿ ಛತ್ರದಲ್ಲಿ ನಡೆಸಬೇಕೆಂದು ಹಿರಿಯರ ಪ್ರೇರಣೆಯಾಗಿದೆಯಾಗಿ ತಾವು ಸಕುಟುಂಬ ಸಪರಿವಾರ ಸಮೇತ ಆಗಮಿಸಿ ನನ್ನ ಮನಸ್ಸು ಸಂತೋಷ ಪಡಿಸಬೇಕೆಂದು ಕೋರುವ—

ಆನೇಕಲ್ ಸೋಮಪ್ಪ ಎಂದು ಮುಕ್ತಾಯವಾಗಿತ್ತು

"ಸಂತೋಷ ನಾಣಿ, ಕಡೆಗೂ ಒಂದು ಹೆಣ್ಣು ನಿನ್ನ ಪಾಲಿಗೆ ಬಂತಲ್ಲ" ಎಂದು ಪ್ರಾರಂಭಿಸಿದೆ

ಈ ಮಾತು ಆಡಬಾರದಾಗಿತ್ತೇನೋ ಪಾಪ ಕಣ್ಣು ಹನಿಗೂಡಿತು. ನಾಣಿ ಬಿಕ್ಕಳಿಸಿದ. ಕುತ್ತಿಗೆ ಸೆರೆ ಉಬ್ಬಿತು. ಮೂಗು ಸೂರ್ ಎಂದು ಎಳೆದುಕೊಂಡಿತು. ಕಾಪಿ ತರಿಸಿ ಸಂತೈಸಿದೆ. "ಯಾಕೆ ದುಃಖ ಮದುವೆ ಎಂದರೆ ನಗಬೇಕು—ತಾಳಿ ಬಿಗಿಯುವ ಹೆಮ್ಮೆ ಮೂಡಬೇಕು ಮುಖದಲ್ಲಿ—ಮಾವನ ಮಗಳೇ? ಮೋಹದ ಹೊನ್ನೆ ? ಎಂದು ಹೇಳಲು ನಿನಗೆ ಸಂತೋಷವಲ್ಲವೆ ?" ಎಂದು ಹುರಿದುಂಬಿಸಿದೆ

ಕುಡಿದ ಕಾಪಿ ಲೋಟ ಕೆಳಗಿಡುತ್ತಾ ನಾಣಿ ಗೋಣು ಎತ್ತಿ ನನ್ನ ನೋಡಿದ. ಭೂತ ಕನ್ನಡಿಯಂತಹ ಕನ್ನಡಕದಲ್ಲಿ ಮಿನುಗಿದ ಆ ಕಣ್ಣಲ್ಲಿ ನಿಜವಾಗಿ ದುಃಖ ತುಂಬಿತು. ಕಲ್ಯಾಣಾಂದರೆ ಕೊರಗುವ ಈ ಕಮಂಗಿಗೆ ಏನು ಮಾಡುವುದೋ ತೋಚಲಿಲ್ಲ. "ನಗೋ—ಮದುವೇಂದ್ರೆ ಯಾಕೋ ಅಳು" ಎಂದು ಬಿರುಸಾಗಿ ಹೇಳಿದೆ. ಧೈರ್ಯದಿಂದ ಹೇಳ ತೊಡಗಿದ.

"ಜಾತಕ ಕೂಡಿ ಬಂದದ್ದು ಗುರು ನಾಲ್ಕನೆ ಮನೇಲಿದ್ದದ್ದರಿಂದ. ಆದರೆ ಶನಿ ಎರಡನೆ ಮನೆ ಬಿಡಲೇ ಇಲ್ಲ. ತಾರ ಬಲವಿಲ್ಲದ್ದೂಂತ ನನಗೆ ತಿಳಿದೆ? ಆದರೂ ಹನುಮಂತರಾಯನ ಛತ್ರವೇಂತ ಛಲ ಹಿಡಿದು ಅಸ್ತು ಅನ್ನಿಸಿದರು-"

"ಬಲವಂತದ ಮಾಘ ಸ್ನಾನವೆ?"

"ವಿಧಿಯಿಲ್ಲದೆ ಹೋಗಿದೆ—ನನ್ನ ಕರ್ಮಕ್ಕೆ ಯಾರು ಹೊಣೆ? ಯಾವ ಯಾವ ಘಳಿಗೆಯಲ್ಲಿ ಹೇಗೆ ಹೇಗೆ ನಡೆಯಬೇಕೆಂದು ದೇವರ ಇಚ್ಛೆ ಇದೆಯೋ ಹಾಗೇ ನಡೆದೀತಲ್ಲದೆ ನಮ್ಮದೇನಿದೆ?—"

"ಯಾಕೆ ನಾಣಿ ವೇದಾಂತಕ್ಕೆ ಇಳಿದುಬಿಟ್ಟೆ—"

"ನಾನಲ್ಲ ಇಳಿದಿದ್ದು ನನ್ನ ಭಾವಿ ಮಾವ ಶ್ಯಾನುಭೋಗ ಗುರುರಾಯರು ಇಳಿಸಿದರು—ಬಲವಂತದಿಂದ ನೂಕಿದರು. ತಳ್ಳಿದರು—ಹಿಡಿದು ಮಾಲೆಕೊಟ್ಟು ತಮ್ಮ ಕುವರಿಯ ಕತ್ತಿಗೆ ಹಾಕಿ ಸುತ್ತಿದ್ದಾರೆ... ಇನ್ನೇನು ಹೇಳಲಿ "........"

"ನಾಣಿ! ನಾನು ನೀನಾಗಿದ್ದರೆ ಓಡಿಹೋಗುತ್ತಿದ್ದೆ, ಊರೇ ಬಿಡುತ್ತಿದ್ದೆ. ಆಜೀವಪರ್ಯಂತ ಏಗುವವನು ನೀನೋ ಗುರುರಾಯನೊ?........ನಾಚಿಕೆಯಿಲ್ಲದೆ ನೀನೇ ಒಲ್ಲದ ಲಗ್ನಕ್ಕೆ ಆಹ್ವಾನ ಪತ್ರಿಕೆ ಬೇರೆ ಕೊಡೋಕೆ ಬಂದಿದ್ದೀಯ . ..."

"ಇದೆಲ್ಲಾ ಮೊದಲೆ ಮಾಡಿದ ಮಸಲತ್ತು—ಮೋಸ. ಒಳಗೇ ಕೊರೆದು ನನ್ನ ದಾರಿ ಅವರ ಕುವರಿಯ ಬಳಿಯೇ ಹೋಗುವಂತಹ ಕೃತ್ರಿಮ ಮಾಡಿದರು"

"ವಿವರವಾಗಿ ವಿವರಿಸಬಾರದೆ ನಾಣಿ!..."

"ಸನ್ ಸಾವಿರದ ಒಂಭೈನೂರ ಹದಿನಾಲ್ಕರಲ್ಲಿ ನನ್ನ ಜನನ...."

"ಅದೆಲ್ಲಾ ನನಗೆ ಗೊತ್ತು ಮಹರಾಯ—ನಿನಗೆ ಮೂವತ್ತೈದು ವರ್ಷವಲ್ಲವೆ?—"

"ಹೌದು"

"ಇಲ್ಲಿನ ತನಕ ಒಂದು ಕನ್ಯೆಯೂ ನಿನ್ನ ಕೈ ಹಿಡಿಯಲು ಬರಲಿಲ್ಲವೆ ?"

"ಒಂದೇಕೆ—ಸಾವಿರ ಬಂದಿದ್ದವು—ಮೊದಲೆ ಹೇಳಿದೆನೆ— ಗುರು ನಾಲ್ಕನೆ ಮನೆ, ಶನಿ ಎರಡನೆ ಮನೆ ಬಿಟ್ಟು ಕದಲೇ ಇಲ್ಲಾಂತ"

"ಹಾಗಂದ್ರೆ ಏನಯ್ಯಾ—ಎಲ್ಲಾದ್ರೂ ಉಂಟೆ ! ಯಾವೊನು ಅವನು ಜ್ಯೋತಿಷಿ ನಿನಗೆ ಹಾಗೆ ಹೇಳಿದ್ದು ಕರ್ಕೊಂಡು ಬಾ ಇಲ್ಲಿ ..."

"ಜ್ಯೋತಿಷಿ ಯಾಕೆ ನಾನೆ ಹೇಳ್ತೀನಿ ಕೇಳಿ—ನಾಲ್ಕನೆ ಮನೆ ಗುರುವಿನ ಸ್ವಂತದ್ದು...."

"ಸ್ವಂತದ್ದು ?....ಹಾಂಗದ್ರೇನಯ್ಯ...."

"ನಮ್ಮ ಮನೆಯಿಂದ ನಾಲ್ಕನೆ ಮನೇಲೆ ನನ್ನ ಭಾವಿ ಮಾವ ಗುರುರಾಯ ಇರೋದು—ಅವನೆಲ್ಲಿ ಆ ಮನೆ ಬಿಡ್ತಾನೆ ?........"

"ಹ್ಹ ಹ್ಹ ಹ್ಹ ...ಹಾಗೋ....ಅವನಲ್ಲಿದ್ದರೇನೀಗ ?"

"ಇನ್ನು ಶನಿ—ನಮ್ಮ ಬೀದಿ ಎರಡನೆಯ ಮನೆನೆ ಅವನದು ಮೊದಲನೆದು ನಮ್ಮದು. ಆ ಸುಬ್ಬರಾಯಪ್ಪ ಇದ್ದಾನಲ್ಲಾ ಅವನು ಯಾವ ಶನಿಗೆ ಕಡಿಮೆ...."

"ಹ್ಹ ಹ್ಹ....ಇವರಿಬ್ಬರ ಮಸಲತ್ತು ನಿನ್ನ ಈ ಲಗ್ನ ಪತ್ರಿಕೆಗೆ ಕಾರಣಾನ್ನು...."

"ಹೌದು ಅರಸಿಕೆರೆ ಹೆಣ್ಣು ಮೋಹಿನಿ ಇದ್ದ ಹಾಗೆ ಇದ್ಲು—ಅವಳನ್ನು ನಾನು ಆಗೋದೂಂತ ಹಟ ಹಿಡಿದೆ. ಹೆಣ್ಣಿನವರೇ ಉತ್ತರ ಬರೀದೆ ಹೋದರು.... .."

"ಕಾರಣ ?"

"ಕಾರಣವೇನು ಇದ್ದಾನಲ್ಲ ಶನಿ ಸುಬ್ಬರಾಯಪ್ಪ....ಹೋಗಿ ಹೇಳಿದ್ದಾನೆ ಅವರಿಗೆ ಪಾಪಿ, ನನಗೆ ಮಲರೋಗಾಂತ . ..."

"ತ್ಸೊ ತ್ಸೊ....ಅನ್ಯಾಯ"

"ತೊಂಡೆಹಾವಿ ತ್ರಿವಿಕ್ರಮರಾಯರ ಮಗಳು ಸಾಕ್ಷಾತ್ ರತಿ.. ... ನಾನು ಹೂಂ—ಅಂದಿದ್ದೆ. ಅದು ಹೇಗೋ ಈ ಶನಿಗೆ ಗೊತ್ತಾಗಿ ಗುರುವಿಗೆ

ಹೇಳಿಬಿಟ್ಟ. ಆ ಗುರು ತ್ರಿವಿಕ್ರಮರಾಯರನ್ನ ಹಿಡಿದು—ಅಯ್ಯೋ ಅವರ ಮನೆಗ್ಯಾಕೆ ಹೆಣ್ಣು ಕೊಡ್ತಿರಾ—ಅದರ ಬದಲು ನೀವೇ ನೇಣುಹಾಕಿಬಿಡಿ ಹುಡುಗಿಗೆ ಆ ಹುಡುಗನ ತಾಯಿ ಮಹಾಕಾಳಿ—ಅತ್ತೆ ಕಾಟ ತಡಿಲಾರದೆ—ಮೊದಲ ಹೆಂಡ್ತಿ ಭಾವಿ ಹಾರಿದಳೂಂತ ಕಿವಿಯಲ್ಲಿ ಊದಿಬಿಟ್ಟ .. .. ಕಾಸರಗೂಡಿಂದ ಒಂದು ಹೆಣ್ಣು ಬಂದಿತ್ತು ...ಅವರಪ್ಪನಿಗೆ ಆನೆಕಾಲ್‌ರೋಗ ಇವನಿಗೂ ಆ ರೋಗ ಬರುತ್ತೆ ಅಂತ ಹೇಳಿ ಅವರನ್ನ ಓಡಿಸಿಬಿಟ್ಟ.... ..."

"ಅಯ್ಯೋ ಪಾಪಿ ಗುರುರಾಯ !"

"ಮನೆತನದ ಹೆಸರು ಆನೆಕಾಲು ಅನ್ನೋದು ಅದನ್ನ ಈ ಗುರು ದುರುಪಯೋಗಮಾಡಿಬಿಟ್ಟ. ನನ್ನ ತಾಯಿ ತೀರಿಕೊಂಡೆ ಎಂಟು ವರ್ಷಕ್ಕೆ ಬಂತಲ್ಲಾ ನನಗೆಲ್ಲಿ ಮದುವೆ ಆಗಿತ್ತು ಹೆಂಡ್ತಿ ಸಾಯೋಕೆ? ಆಗ್ತಿರೋದೆ ಆ ಗುರುರಾಯನ ಮಗಳು ಮೊದಲು ಅವಳೇ ಸಾಯಬೇಕಷ್ಟೆ........"

"ಛೆ ಛೆ ಅಂತಹ ಕೆಟ್ಟ ಮಾತಾಡಬೇಡ ನಾಣಿ ."

"ಇನ್ನೇನು ಬಿಡ್ರಿ—ಬಂದ ಹೆಣ್ಣೆಲ್ಲಾ ಹೀಗೆ ಹಾಳುಮಾಡಿ ...ತನ್ನ ಮಗಳಲ್ಲದೆ ಬೇರಾವ ಹೆಣ್ಣು ಬರುತ್ತೋ ನೋಡೋಣಾಂತ ಮೀಸೆ ತಿರುವುತ್ತಾನಲ್ಲಾ ಆ ಗುರುರಾಯ ."

"ಇಲ್ನೋಡು ನಾಣಿ—ನೀನೂ ಆಗ್ತಿನೀಂತ ಒಪ್ಕೊಂಡು ಲಗ್ನಪತ್ರಿಕೆ ತಂದಿದ್ದೀಯ ಅನ್ಯೋನ್ಯವಾಗಿ ರಾಮಕೃಷ್ಣಾಂತ ಇರು—ಆಗಿಹೋದ ವಿಷಯಕ್ಕೆ ಚಿಂತೆಯಾಕೆ ಕೋಪವೇಕೆ?...ಲಗ್ನಪತ್ರಿಕೇಲಿ ಬಕರ ಲಗ್ನಾಂತ ಪ್ರಿಂಟಾಗಿದೆ—ಮಕರಾಂತಲಾದರೂ ತಿದ್ದಬೇಡವೆ ನೀನು ?"

"ನಾನು ಯಾವ ಬಕರನಿಗೆ ಕಡಿಮೆ? ಬೇಕಂತಲೆ ಹಾಗೆ ಬಿಟ್ಟೆ... ತಾರ ಬಲವಾದರೂ ಬೇಡವೆ ನನ್ನ ಪಾಲಿಗೆ? ಗೃಹಗಳೇನೋ ವಕ್ರಗಳು ವಕ್ಕರಿಸಿದವು ..."

"ತಾರ ಬಲ ! ..."

"ಅದೇ ನಾನು ಒಪ್ಪೇದ್ದೀನಲ್ಲಾ....ಅಲ್ಲ ಅವರು ಒಪ್ಪಿದ್ದಾರಲ್ಲಾ—ಹುಡುಗಿ ತಾರಾಮಣಿ—ಅವಳಿಗೆ ಬಲವೇ ಇಲ್ಲ. ಕದರುಕಡ್ಡಿ. ಕಿಳ್ಳೈಕ್ಯಾತ—ಉಬ್ಬುಹಲ್ಲು ಮಾರುದ್ದ ಮೂಗು ಸದಾ ಕೆಮ್ಮು—ಇನ್ನೆಲ್ಲಿದೆ ಆ ತಾರೆಗೆ ಬಲ? ಇಂಥ ಹೆಣ್ಣಿಗೆ ಮಾಲೆ ಹಾಕೋ ನನ್ನದು ಬಕರ ಲಗ್ನವಲ್ಲದೆ ಮತ್ತೇನು?

"ಹ್ಹ ಹ್ಹ....ನಿನ್ನ ಕರ್ಮ ಕಣೊ"


"ಬೇರೆ ಆಗೋಹಾಗಿಲ್ಲ— ಹಾಗಿಲ್ಲ ಏನು ಬೇರೆ ಹೆಣ್ಣು ಬರೋಕೆ ಈ ಶನಿ ಗುರುಗಳು ಬಿಡೊಲ್ಲ—ಇನ್ನು ಗುರುಮಗಳ ಬಿಟ್ರೆ ಗತಿ ಇಲ್ಲ. ಹೀಗಾಗಿದೆ ನನ್ನ ಪರಿಸ್ಥಿತಿ......"

ಎಂದು ಹೇಳಿ ಗಳ ಗಳನೆ ಅತ್ತುಬಿಟ್ಟ ನಾರಾಣಪ್ಪ. ಆಯ್ಯೋ ಪಾಪಿ ಎಂದೆನಿಸಿತು. ಆದರೂ ನಾಣಿಗಿರೋ ಕೆಲಸಕ್ಕೆ—ಅವನು ಈ ಗುರುರಾಯ ಹೆಣ್ಣಿನ ಜೊತೆಗೆ ಕೊಡುವ ಹೊಲದಲ್ಲೇ ಬೇಸಾಯ ಹೂಡಿದರೇ ಇವನಿಗೆ ಕೆಲಸ— ವಿದ್ಯೆಗೆ—ತಾರೆಯೇ ತಕ್ಕ ಮಡದಿ ಎಂದೆನ್ನಿಸಿತು ನನಗೆ. ಮತ್ತೊಂದು ಲೋಟ ಕಾಪಿ ಕೊಟ್ಟೆ. ಕುಡಿದು ಎದ್ದುನಿಂತ.

"ಇನ್ನೂ ನಾನೆ ಮನೆಗಳಿಗೆ ಪತ್ರಿಕೆ ಕೊಡಬೇಕು ..ನನಗೂ ಮೂವತ್ತೈದು ಆಯ್ತು ಇನ್ನು ಯಾವ ಹೆಣ್ಣೂ ಬರುವುದಿಲ್ಲವೆಂದು ನಿಶ್ಚಯವಾದ ಮೇಲೆ ತಾರೆಗೆ ಕೈಕೊಟ್ಟದ್ದು .. ಲಗ್ನದ ಹೊತ್ತಿಗೆ ಖಂಡಿತ ಬರಬೇಕು" ಎಂದು ಹೇಳಿ ನಾಣಿ ಹೊರಬಿದ್ದ.

—ದಾಶರಥಿ ದೀಕ್ಷಿತ್.

—— o ——



ಶಾಲಾ ಮಾಸ್ತರು :—

ಕೊರಿಯಾ ಯುದ್ಧದಲ್ಲಿ ಅಟಂಬಾಂಬು ಉಪಯೋಗಿಸಬೇಕೋ ಬೇಡವೋ ?

'ಹ್ಞೂ' ಅನ್ನುವವರೆಲ್ಲಾ ಕೈಎತ್ತಿ. 'ಊಹೂಂ' ಅನ್ನುವವರು ಸುಮ್ಮನಿರಿ.

ಕೂರ್ಪ ವ್ಯವಸ್ಥೆ

[ಮೈಸೂರು ಮಲ್ಲಿಗೆಯ "ರಾಯರು ಬಂದರು ಮಾವನ ಮನೆಗೆ"
ಎಂಬ ಪದ್ಯದ ಧಾಟಿಯನ್ನು ಅನುಸರಿಸಿ]

೧. ಬಡವರು ಬಂದರು ಕಛೇರಿ ಬಳಿಗೆ
ಬಾಗಿಲು ತೆಗೆದಿತ್ತು;
ವಿಶಾಲವಾದ ಕಛೇರಿ ಒಳಗಡೆ
ಜನಗಳ ಗುಂಪಿತ್ತು—ತುಂಬಿದ
ಜನಗಳ ಗುಂಪಿತ್ತು.

೨. ಕಛೇರಿ ಒಳಗಡೆ ಕಾಗದ ಪತ್ರದ
ಗಂಟನು ತುಂಬಿತ್ತು.
ಬಾಗಿಲ ಬಳಿ ಜನಗಳ ತಡೆಯಲು
ಕಾವಲು ನಿಂತಿದ್ದ—ಒಳಗಡೆ
ರಾಯನು ಕುಂತಿದ್ದ.

೩. ಅರ್ಜಿಯ ವಿಷಯದಿ ಜನಗಳ ಗುಂಪು
ರಾಯನ ಕಾದಿತ್ತು.
ವಿಧ ವಿಧ ಅರ್ಜಿಯ ಕಾಗದಕಟ್ಟು
ರಾಯನ ಕೈಲಿತ್ತು—ಆಫೀಸಿಗೆ
ದೊಂಬಿಯೆ ಬಂದಿತ್ತು.

೪. ಚಪ್ಪರ ಗಾಲಿನ ಕುರ್ಚಿಯ ಮೇಗಡೆ
ಪಂತರು ಕುಳಿತಿದ್ರು.
ಮುಂಗಡೆ ಮೇಜಿನ ಮೂಲೆಯ ತುದಿಯಲಿ
ಅರ್ಜಿಯು ಇಟ್ಟಿತ್ತು.—ವಿಧ ವಿಧ
ಕೂರ್ಪ ಕಟ್ಟಿತ್ತು.

೫. ಎಲ್ಲಾ ಅರ್ಜಿಯ ವಿವರದಿ ಓದಿದ
ಪಂತರು ವಿನಯದಲಿ;
ಓದಿದ ಅರ್ಜಿಯ ವಿಷಯವ ತಿಳಿದರು.
ರಾಯರು ಮನಸಿನಲಿ—ನೋಡ್ದರು
ಜನಗಳು ನಿಂತಿಲ್ಲ.

೬. ಬಾಗಿಲ ಆಳನು ಕರೆದಿಂತೆಂದರು :
“ಬಡವನ ಕರೆಯಯ್ಯ”
ಮೆಲು ಧ್ವನಿಯಲಿ ಆಳಿಂತೆಂದನು :
“ಬನ್ನಿರಿ ಬಡ ಜನರೆ”—ಬರುತಲೆ
ರಾಯನು ಮುನಿಸಿದನು.


೭. ಬಂದಿಹ ಜನರನು ಘಂಡನು ಕೇಳ್ದನು
ರಾಯನು ಆತುರದಿ.
ಜನಗಳು ಹೇಳ್ದರು. ಹಣವಿಲ್ಲೆಂದು
ರಾಯನು ರೇಗಿದನು — ಜನಗಳ
ಜೋಬಲಿ ದುಡ್ಡಿಲ್ಲ.

೮. ಹೊತ್ತಾಯಿತು ; “ಸರಿ ಹೊರಡುವೆ”ನೆಂದನು
ರಾಯನು ಮುಳಿಸಿನಲಿ
ಹಣವನು ಕೊಟ್ಟು ಕೂರ್ಪ ಕೇಳ್ದರು.
ಬಡವರು ದೈನ್ಯದಲಿ.—ಆಯಿತು,
ಅಪ್ಪಣೆ ಅರ್ಜಿಯಲಿ.

ಕೂರ್ಪ ಬಂದಿತು ಸಂಜೆಯ ವೇಳೆಗೆ
ಬಡವರ ಕೈಗಳಲಿ.

—ವಂ. ರಾ. ಶ್ರೀ.

—o—



ಹುಂಜ:

ಆಹಾ! ಏನು ಜಂಭಮಾಡ್ತೀಯೋ!

ಅದಕ್ಕೇ ಜಂಭದ ಕೋಳಿ ಅಂತಾರೇ ಹೊರ್ತು ಜಂಬದ ಹುಂಜ ಅನ್ನೋದಿಲ್ಲಾ!

ಗೋಲಿಯಿಂದ ಗೋಲಿಗೆ

ನಮ್ಮ ತಂದೆ ಹೆಸರು ನೀವು ಕೇಳಿರಬಹುದು. ಪಿಟೀಲು ಕೃಷ್ಣಪ್ಪ ಅಂತ ಅವರಿಗೆ ನಮ್ಮೂರು ಕಡೆ ಬಹಳ ಪ್ರತೀತಿ. ಅಮಿಲ್ದಾರರ ಅಧ್ಯಕ್ಷತೆಯಲ್ಲಿ ನಮ್ಮೂರಲ್ಲಾಗುವ ಹರಿಕಥೆಗಳಿಗೆಲ್ಲ ಅವರದೇ ಪಕ್ಕವಾದ್ಯ ಕೇವಲ ಎರಡೇ ಎರಡು ರೂಪಾಯಿಗೆ ಮೂರು ಗಂಟೆ ಕೂತು ಕುಯ್ಯುವ ಪುಣ್ಯಾತ್ಮ ಕರ್ನಾಟಕ ದಲ್ಲೇ ವಿರಳ.

ನಾನೂ ಪಿಟೀಲು ಕಲಿಯಬೇಕು ಅಂತ ಅವರು ಹಟ ಹಿಡಿದರು. ನಮ್ಮಮ್ಮ ನನ್ನ ಪರ ಬಹುದಿನ ವಾದಿಸಿದಳು. ಆದರೆ, ಅಪ್ಪನದು ಕಲ್ಲೆದೆ; ನಶ್ಯ ಏರಿಸಿದರಂತೂ ಅವರು ಜಗ್ಗುವುದು ಅಪರೂಪ. ನನ್ನ ಪಾಡಿಗೆ ನಾನು ಹಾಯಾಗಿ ಸ್ಕೂಲ್ ಮುಗಿಸಿ, "ಹುಡುಗರೊಂದಿಗೆ ಗೋಲಿ ಆಡುತ್ತಿದ್ದೆ. ಅದಕ್ಕೆ ಕಲ್ಲು ಬಿತ್ತು.

ನನಗೋಸ್ಕರ ಅಪ್ಪ, ಹರಾಜಿನಲ್ಲಿ ಒಂದು ಹಳೇ ಪಿಟೀಲು ಕೊಂಡು ತಂದ ಅದಕ್ಕೆ ಅರಶಿನ ಕುಂಕುಮ ಹಚ್ಚಿ, ದೇವರ ಗೂಡಿನಲ್ಲಿರಿಸಿ, ತೆಗೆದ. ನಾನು ಅಳುತ್ತಾನೇ ಮಂಗಳಾರತಿಗೆ ಕೈ ಒಡ್ಡಿದೆ, ಅಜ್ಜಿಗೂ ಅಮ್ಮನಿಗೂ ಅಪ್ಪ ನಿಗೂ ನಮಸ್ಕಾರ ಮಾಡಿದೆ.

ಕೊಟ್ಟರು ಕೈಗೆ . ಪಿಟೀಲನ್ನು ಅದರ ಕೋಲನ್ನೂ. ತಲೆಕೆಳಗಾಗಿ ಹಿಡಿದದ್ದನ್ನ ಅಪ್ಪ ಶಪಿಸುತ್ತಲೇ ಸರಿಮಾಡಿದ ಎತ್ತುತ್ತ ಅಪಶಕುನವಾಯಿ ತಲ್ಲಾ, ಒಬ್ಬನೇ ಒಬ್ಬ ಮಗ, ಕುಲದ ಕೀರ್ತಿಗೆ ಕಳಂಕ ಬರುತ್ತಲ್ಲಾ, ಅಂತ ಅವರಿಗೆ ಕೋಪ. ಕೋಪಕ್ಕೆ ನಶ್ಯದಿಂದ ಕಾವು ಏರಿತು. ಕಡ್ಡೀನ ಉದ್ದಕ್ಕೂ ಎರಡು ಬಾರಿ ಎಳೆದೆ. ವಿಕಾರವಾದ ಒಂದು ಚೀತ್ಕಾರ ಅದರೊಳಗಿಂದ ಹೊರ ಹೊಮ್ಮಿತು.

ಅಪ್ಪನ ಮುಖ ಹುಳಿ ಮಜ್ಜಿಗೆ ಕುಡಿದಂತಾಯಿತು. ಬಾಯಿ ಅಗಲಿಸಿ ದರು. ಉಸಿರನ್ನು ಒಳಕ್ಕೆ ಎಳೆದುಕೊಂಡ. ಕಣ್ಣನ್ನು ಅರ್ಧ ಮುಚ್ಚಿಕೊಂಡ. ಕೈಗಳೆರಡೂ ಕಿವಿಗಳನ್ನರಸಿದುವು. ನರಕಯಾತನೆಯಿಂದ ನನ್ನ ಪಿಟೀಲು ನರ

ಳುವಂತಿತ್ತು, ನನಗೂನು. ತನ್ನ ಪಿಟೀಲನ್ನು ಕೆಳಗಿರಿಸಿ, ಅಪ್ಪ ನನ್ನದನ್ನ ತಾನು ಕೈಗೆ ತೆಗೆದುಕೊಂಡ. ಅದರ ಕಿವಿಗಳನ್ನು ಒಂದೆರಡುಸಲ ನುಲಿಚಿದ. ಅದರ ಮೇಲೆ ಕಡ್ಡಿಯಾಡಿಸಿದ. ನಿ ಗ ಮ ಪ ಸ ಅಂತ ಅದು ಅಪ್ಪನಿಗೆ ಹೇಳಿತು. ನೋಡೋ, ಹೀಗೆ ಹಿಡಿಯೋ, ಹಾಗೆ ಎಳೆಯೋ, ಹೀಗೆ ನುಡಿಸೋ, ಎಡಗೈ ಬೆರಳುಗಳನ್ನ ಹೀಗೆ ಏರಿಸಿ ಆಡಿಸೋ, ಅಂತ ಸುಲಭ ವಾಗಿ ಹೇಳಿಕೊಟ್ಟ.

ನಾನು ಆಡಿಸಿದೆ. ಅಪ್ಪ, 'ಅಯ್ಯೋ' ಎಂದ. ಅವನ ಕಣ್ಣು ಅಲ್ಲೇ ಬಿದ್ದಿದ್ದ ರೂಲುದೊಣ್ಣೆಯ ಮೇಲೆ ಬಿತ್ತು. ಆದನ್ನೆತ್ತಿ, ನನ್ನ ಪಿಟೀಲಿನ ಮೇಲೆ ಬಲವಾಗಿ ಹೊಡೆಯುಲಾರನೆ, ಎಂದು ನಾನು ಅಂದುಕೊಂಡೆ. ನನ್ನನ್ನೇ ಹೊಡೆಯುಬಹುದು, ಅಂತ ನನಗನ್ನಿಸಲಿಲ್ಲ. "ಮೆಲ್ಲಗೆ ಬಾರಿಸೂ, ನಿಧಾನ ಇರಲಿ, ಒತ್ತಬೇಡ, ಉದ್ದಕ್ಕೂ ಎಳೆ" ಅಂತ ಏನೇನೋ ಹೇಳಿದ; ನಾನೂ ಏನೇನೋ ಮಾಡಿದೆ. ಪ್ರಯೋಜನವಾಗಲಿಲ್ಲ.

ಕಡೇಗೆ, "ಸಾಕು, ಹೋಗು" ಎಂದು ನಿಟ್ಟುಸಿರು ಬಿಟ್ಟ.

. ಮರುದಿನವು ಅಪ್ಪನಿಗೆ ಅದೇ ಗೋಳು. ಅವತ್ತು, ಒಂದು ಸಣ್ಣ ಬೆತ್ತ ವನ್ನು ಎಲ್ಲಿಂದಲೋ ಸಂಪಾದಿಸಿ ತಂದಿದ್ದ. "ಅದ್ದರಿಂದ, ನನ್ನ ಕೈ ನಡು ಗಿತು. ಒಂದೆರಡು ಬಾರಿ ಪಿಟೀಲು ಕೆನ್ನೆ ಕೆಳಗಿಂದ ಜಾರಿ ನೆಲಕ್ಕೆ ಬಿತ್ತು. ಉದ್ದಕ್ಕೂ ಅಪ್ಪ ಗೊಣಗುತ್ತಲೇ ಇದ್ದ. ಅವನ ಕಣ್ಣಲ್ಲಿ ನೀರು ತುಂಬಿತು. ಅಮ್ಮ ರೂಮಿನೊಳಕ್ಕೆ ಬಂದು, ಪಾಪ, ಅವನಿಗೇಕೆ ಚಿತ್ರಹಿಂಸೆ, ಅಂತ ಏಳೆಂಟುಬಾರಿ ನನ್ನ ವಕಾಲತ್ ವಹಿಸಿದಳು ಮಗುವಿಗೆ ಜ್ವರವೋ ಏನೋ, ಅಂತ ನನ್ನ ಪಕ್ಷವಹಿಸಿ ಮಾತಾಡಿದಳು. ಅಪ್ಪ ಹಣೆ ಚಚ್ಚಿಕೊಂಡ.

ನಾನು ನನ್ನನ್ನು ಶಪಿಸಿಕೊಂಡೆ. ರಾತ್ರಿ ಎಲ್ಲ ದೇವರನ್ನು ಪ್ರಾರ್ಥಿ ಸಿದೆ. ನನ್ನ ಜನ್ಮದಾತನಿಗೆ ನನ್ನಿಂದ ನೋವಾಗುತ್ತಿದೆಯಲ್ಲಾ, ಎಂದು ಮರುಗಿದೆ. ನನ್ನ ದಿಂಬು ಒದ್ದೆಯಾಯಿತು. ಪಿಟೀಲನ್ನು ಹಿಡಿದು ಮನ ಬಂದಂತೆ ಬಾರಿಸಲು ತೊಡಗಿದೆ. ಆದರೆ ಮನೆಯೆಲ್ಲ ರಂಪು ಪ್ರಾರಂಭವಾ ಯಿತು. ಎಲ್ಲರೂ ದೇವರಲ್ಲಿ ಮೊರೆ ಇಡಲು ಷುರು ಮಾಡಿದರು. ಅಕ್ಕ ಪಕ್ಕದ ವರೊಂದಿಗೆಲ್ಲ ನಮ್ಮಮ್ಮ ಅಪ್ಪನ ಮೇಲೆ ದೂರು ಹೇಳ ತೊಡಗಿದಳು. ನನ್ನ ಅಕ್ಕಂದಿರಿಬ್ಬರೂ, ಗಂಡನ ಮನೆಗೆ ಹೊರಟುಬಿಡ್ತೇವೆ ಅಂತ ಹಟಮಾಡಿದರು.

ನನಗೆ ತೀರ ಅಪಮಾನವಾಯಿತು. ದರಿದ್ರ ಒಂದು ಪಿಟೀಲನ್ನು ಹಿಡಿದು, ಅದರಲ್ಲಿ ಏಳು ಸ್ವರಗಳನ್ನು ಹೊರಡಿಸಲಾರದೆ ನಾನು ಗಂಡಸಾಗಿ ಹುಟ್ಟಿ ಫಲವೇನು ಅಂತ ನನಗೆ ರೇಗಿತು. ಸಾಧಕವನ್ನು ಮುಂದುವರಿಸಿದೆ.

ಇದರಿಂದ, ಮನೆಯಲ್ಲಿ ಮುಸುರೆ ತಿಕ್ಕುತ್ತಿದ್ದವಳು ಕೆಲಸ ಬಿಟ್ಟು, ಓಡಿಹೋಗಿ ಹಳ್ಳಿ ಸೇರಿಕೊಂಡಳು. ಅಪ್ಪನನ್ನ ನೋಡಿ ಮಾತನಾಡಿಸುವುದಕ್ಕೆ ಬಂದ ಊರಿನ ಯಜಮಾನರೆಲ್ಲ ಒಂದೆರಡು ನಿಮಿಷಗಳಲ್ಲೇ ಹೊರಬಿದ್ದರು. ನಮ್ಮಪ್ಪ ಇಸ್ಕೂಲು ಮೇಷ್ಟರು, ಪಾಠಕ್ಕೆ ಅಂತ ನಾಲ್ಕೈದು ಲೋವರ್ ಸೆಕೆಂಡರಿ ಹುಡುಗರು ಮನೆಗೆ ಬರುವರು. ಅವರೆಲ್ಲ ಬೇರೆ ಮೇಷ್ಟರನ್ನು ಹುಡುಕಿದರು. ತೊಟ್ಟಿಲಲ್ಲಿ ಬಿದ್ದಿದ್ದ ಮಗುವಿನ ಅಳುವನ್ನು ನಿಲ್ಲಿಸುವುದು ಅಸಾಧ್ಯವಾಯಿತು

ಅಪ್ಪ ಮಾತ್ರ ತನ್ನ ಸಂಕಲ್ಪವನ್ನು ತೊರೆಯಲಿಲ್ಲ. ಇವತ್ತಲ್ಲ, ನಾಳೆ, ಸರಿ ಹೋಗುತ್ತೆ; ಪಿಟೀಲುವಂಶದ ಕೀರ್ತಿ ನನ್ನಿಂದ ಉದ್ಧಾರವಾಗುತ್ತೆ ಎಂದು ನೆನೆದು, ಹಲ್ಲುಕಚ್ಚಿ, ಕಿವಿ ಮುಚ್ಚಿ, ನನ್ನೆದುರು ಕುಳಿತು, ನನಗೆ ಪಾಠ ಹೇಳುತ್ತಲೇ ಇದ್ದ. 'ಸರಸಸಾ। ಮದನ' ತನಕ ಬಂದೆ ನಾನು. ಅದಷ್ಟನ್ನಾದರೂ ಬಾರಿಸೇ ಬಿಡಬೇಕು, ಅಂತ ನನ್ನ ನಿಶ್ಚಯ; ಅದನ್ನೂ ಕೂಡ ಸರಿಯಾಗಿ ಹೇಳುವುದಿಲ್ಲ, ಅಂತ ಆ ಹಾಳು ಗುಜರೀ ವಾದ್ಯದ ಹಟ! ಒಂದು ವಾರ ಹೆಣಗಾಡಿದೆ.

ನಾನು ಪಿಟೀಲು ಹಿಡಿದು ಕೂತೆ, ಅಂದ್ರೆ, ಸರಿ!—ಎದುರು ಮನೆಯವರು ಕದ ಕಿಟಕಿಗಳನ್ನೆಲ್ಲ ಭದ್ರವಾಗಿ ಮುಚ್ಚಿ, ಹಿತ್ತಲ ಬಾಗಿಲಿಂದ ಓಡಾಡುವುದಕ್ಕೆ ಪ್ರಾರಂಭ. ಜಟಕಾದವರೆಲ್ಲ ನಮ್ಮ ಮನೆ ಮುಂದಿನ ರಸ್ತೆ ತಪ್ಪಿಸಿ, ಬಳಸುದಾರಿ ಹಿಡಿಯುವುದಕ್ಕೆ ಷುರು; ಭಿಕ್ಷುಕರೂ ಹಳೇ ನಿರಾಜಿ ಕಂಬಿಯವರೂ ಸುಳಿದಾಟ ನಿಲ್ಲಿಸಿ, ಬೇರೆ ಬೀದಿಗಳಿಗೆ ನುಗ್ಗುವರು. ನೆಂಟರಿಷ್ಟರು ಒಬ್ಬರೂ ನಾಲ್ಕು ನಿಮಿಷದ ಮೇಲೆ ನಿಲ್ಲಲೇ ಇಲ್ಲ.

ನಮ್ಮ ಮನೆ ಎಮ್ಮೆ ಕೂಡ, ಬೀದಿ ಕೊನೆಯಲ್ಲೇ ನಿಂತಿರುತ್ತದೆ; ನಾನು ಪಿಟೀಲು ಪಾಠ ಮುಗಿಸಿದ ಮೇಲೆ, ಅಲ್ಲಿಂದ ಹೊರಟು, ಹೆದರಿಕೊಂಡು ನಡುಗುತ್ತ. ಕಿವಿಯನ್ನು ನೆಟ್ಟಗೆ ನಿಲ್ಲಿಸಿಕೊಂಡು, ತಲೆ ತಗ್ಗಿಸುತ್ತ, ಮುಂಬಾಗಿಲ ಕಡೆಯಿಂದ, ಹಜಾರ ದಾಟಿ, ಒಳಕ್ಕೆ ಬರುತ್ತೆ

ಮೊನ್ನೆ, ಹಾಲು ಒಡೆಯಿತು, ಅನ್ನ ಮಿಡ್ಡೆಯಾಯಿತು; ಕುಂಬಳಕಾಯಿ ಕೊಳೆಯಿತು. ಕಣಿಗಲು ಹೂವೆಲ್ಲ ಬಾಡಿ ಉದುರಿದುವು; ಬೆಕ್ಕು ಸತ್ತುಹೋಯಿತು.

ನಿನ್ನೆ, ಅಪ್ಪನಿಗೆ ಬುದ್ಧಿ ಬಂತು. ಇವತ್ತು, ಪಿಟೀಲು ಗುಜರಿಗೆ ವಾಪಸ್ ಹೋಯಿತು ....ಈಗ, ನಾನು ಮತ್ತೆ ಗೋಲಿಯಾಡುತ್ತಿದ್ದೇನೆ.

—ಕುಮಾರ ವೆಂಕಪ್ಪ.

—— o ——

ಭಾರಿ ಹುದ್ದೆ

ಕನ್‌ಗ್ರಾಚುಲೇಷನ್ಸ್ ...ಸಾರ್....ಭೇಷ್, ನಿಮ್ಮ ಲಕ್ಕೇ ಲಕ್ಕು! ಪರವಾಗಿಲ್ಲ......ಒಳ್ಳೇ ಭಾರಿ .. ಬೇರೆ ಕೆಲ್ಸ ಸಿಕ್ಕಿತಂತೆ. ಭಾಳ ಸಂತೋಷ. .. ಯಾವಾಗಲಪ್ಪಾ ಒಂದು ಟೀಪಾರ್ಟಿ ಅರೇಂಜ್ ಮಾಡಿ ಸಾರ್ .. 'ಉಪಾಧ್ಯಾಯಶ್ಚ, ವೈದ್ಯಾಶ್ಚ' ಅಂತಾ ಹೇಳ್ತಾ ಈ ಮೇಷ್ಟ್ರು ಕೆಲ್ಸ ಜನ್ಮ ಜನ್ಮಾಂತರಕ್ಕು ಬೇಡಪ್ಪಾ. ಅಂತಿದ್ರಿ .. ಅದಕ್ಕೆ ಸರಿಯಾಗಿ ಬೇರೆ ಭಾರೀ ನೌಕರಿ ಸಿಕ್ಕಿದ್ದು ನಿಮ್ಮ ಅದೃಷ್ಟವಲ್ಲದೆ ಮತ್ತೇನು?....ಅಲ್ಲಾ ಸಾರ್ ನಾನು ನಿಮ್ಮ ಆಪ್ತ....ನನಗೇ ಇನ್ನೂ ತಿಳಿಸಲಿಲ್ಲವಲ್ಲಾ! 'ಅದೇ ನಿನ್ನೆ ನಮ್ಮ ಮನೇ ಹೆಂಗಸ್ರು ನಿಮ್ಮ ಮನೇಗೆ ಬಂದಿದ್ದಾಗ ಅದೂ ಇದೂ .. ಮಾತಾಡ್ತಾ ನಿಮ್ಮಾಕೆ ಹೇಳಿದ್ರಂತೆ :—

ಹೀಗೆ ಹೊಸ ನೌಕರಿ. ಸರ್ಕಾರಿ ಹುದ್ದೆ....ಅದೂ ಈ ಕಾಲದಲ್ಲಿ ಸಿಕ್ಕೋದು ಪುಣ್ಯ ಅಲ್ಲವೇ? ನಾಳೆಯಿಂದಲೇ ..ಡ್ಯೂಟಿಮೇಲೆ ಹಾಜರಾಗಬೇಕಂತೆ 'ಅಂತೆಲ್ಲ ಹೇಳಿದ್ರಂತೆ'. ನನ್ನಾಕೆ ನನ್ನನ್ನು ನೀವು ಈ ಹಾಳು ಅಂಗಡೀ ಮೇಲೆ ಕೂರೋ ಕೆಲ್ಸ ಬಿಟ್ಟು ಸುಶೀಲಮ್ಮನ ಯಜಮಾನ್ರಹಾಗೆ ಹ್ಯಾಗಾರೂ ಮಾಡಿ ಒಂದು ಭಾರೀ ಹುದ್ದೆ ಗಿಟ್ಟಿಸಿ ...ಆಫೀಸರಾಗಬಾರ್ದೇಕೆ 'ನಂಗೆ ನೀವು ಆಫೀಸರಾಗಬೇಕೂಂತ ತುಂಬಾ ಆಸೆ ..ಅಂತ ನನಗೆ ಸಲಹೆ ಕೊಟ್ಳು'.

ಅಂದ್ಹಾಗೆ ಸುಬ್ಬರಾಯರೆ, ಸ್ವಾತಂತ್ರ್ಯ ಬಂದಿದ್ದಕ್ಕೆ ಸಾರ್ಥಕವಾಯ್ತು. ಸರಕಾರ, ಜಾತಿ, ಮತ ಭೇದವಿಲ್ಲದೆ ನ್ಯಾಯವಾಗಿ ಜನರಿಗೆ ನೌಕರಿ ಕಲ್ಪಿಸಿ ಕೊಡುತ್ತಿದೆ ಸಾರ್ ..ಅಂತೆಲ್ಲಾ ಪಾಪ .. ಮನಕರಗಿ ಮರುಗಿ ಖುಷಿಪಟ್ಟುಕೊಂಡು ಅದೇ .. ಆವರು . ನನ್ನ ಗೆಳೆಯ ಗೋವಿಂದರಾಯರು ನನ್ನನ್ನು ಅಭಿನಂದಿಸಿದರು......ಮೊನ್ನೆ ಬಸ್‌ಸ್ಟಾಪಿನಲ್ಲಿ ಸಿಕ್ಕಿ.

—ನಾನಂದೆ. . ಹೌದು ಮಿಸ್ಟರ್ ಗೋವಿಂದರಾವ್ ಭಾರೀ ಹುದ್ದೆ ದೊರಕಿದೆ. . .ಅದೇ 'ಸೆನ್ಸಸ್ ಎನ್ಯೂಮರೇಟರಾಗಿ' ಹುಕುಂ ಬಂದಿದೆ. . . ಎಂದು ಹೌಸ್ ಬ್ಲಾಕ್‌ಲಿಸ್ಟ್ ಹಿಡಿದುಕೊಂಡು ಬೌಂಡರಿ ಚೆಕ್ ಮಾಡೋಕೆ ಬಸ್ ಹತ್ತಿದೆ.

—ಜಿ. ಪಿ. ಸು.

ಶಿಶು ಸಾಹಿತ್ಯ

ಮಕ್ಕಳಿಗಾಗಿ ಕವನ ಬರೆಯುವುದು ಅತಿ ಸುಲಭ. ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ನಪಾಸಾದವರೆಲ್ಲ ಈ ಕಸಬನ್ನು ಅವಲಂಬಿಸಬಹುದು. ಇದಕ್ಕೆ, ಮದುವೆಯಾಗಬೇಕು ಮಕ್ಕಳನ್ನು ಹೆತ್ತಿರಬೇಕು, ಎಂಬ ನಿರ್ಬಂಧವಿಲ್ಲ. ವಿದ್ಯಾ ಬುದ್ಧಿ ಬೆಳೆಯದೆ, ಕೇವಲ ಹಸುಳೆಯಂತಿರುವ ಹಿರಿಯರೆಲ್ಲರಿಗೂ ಇಲ್ಲಿಗೆ ಸುಸ್ವಾಗತ.

ಈ ಪದ್ಯಗಳನ್ನು ಎಡದಿಂದ ಬಲಕ್ಕೆ ಬರೆಯುವುದಕ್ಕಿಂತ ಬಲದಿಂದ ಎಡಕ್ಕೆ ಬರೆಯತೊಡಗುವುದೇ ಅನುಕೂಲ ಉದಾಹರಣೆಗೆ, ಕಾಯಿ ಎಂಬ ಬಲಭಾಗದ ತುತ್ತ ತುದಿಯ ಮಾತು, ಅದನ್ನು ಎಂಟು ಸಲ, ಒಂದರ ಕೆಳಗೊಂದು ಬರೆದಿರಿಸಿಕೊಳ್ಳಿ. ಅನಂತರ, ಅಮಟೇಕಾಯಿ, ಟಮಟೇಕಾಯಿ, ತೊಗಟೇಕಾಯಿ, ಜಿಗುಟೇಕಾಯಿ, ಸಿವುಟೇಕಾಯಿ, ಬಿರಟೇಕಾಯಿ, ಹರಟೇಕಾಯಿ, ಅಂತ ಅವುಗಳಿಗೆಲ್ಲ ಹೆಸರಿಟ್ಟು, ಬರೆಯಿರಿ. ಇನ್ನು, ಅದರ ಎಡಕ್ಕೆ ಒಂದೊಂದು ಪದ ಸೇರಿಸಿದರೆ, ಪದ್ಯ ಮುಗಿಯಿತು; ಅಚ್ಚಾಫೀಸಿಗೆ ರವಾನಿಸಬಹುದು.

ಅಣ್ಣನಿಗೊಂದು ಅಮಟೇಕಾಯಿ
ತಮ್ಮನಿಗೊಂದು ಟಮಟೇಕಾಯಿ
ತಾತನಿಗೊಂದು ತೊಗಟೇಕಾಯಿ
ಜಾನಕಿಗೊಂದು ಜಿಗುಟೇಕಾಯಿ
ಸಾತೀಗೊಂದು ಸಿವುಟೇಕಾಯಿ
ಭಾನುಮತೀಗೆ ಬಿರಟೇಕಾಯಿ
ಕನಕಂಗೊಂದು ಕರಟೇಕಾಯಿ
ಹೇಮೂಗೊಂದು ಹರಟೇಕಾಯಿ

ಹತ್ತು ಪಂಕ್ತಿ ಬೇಕೇ ಬೇಕಾದರೆ, ಕಾಯಿ ಕಾಯಿ ಕಾಯಿ ಕಾಯಿ, ಎಂದು ಒಂದು ಪಂಕ್ತಿ, ಅದನ್ನೇ ಮತ್ತೆ ಇನ್ನೊಂದು ಪಂಕ್ತಿ, ಬಲದಿಂದ ಎಡಕ್ಕೆ ರಚಿಸಿ, ಒಂದರ ಕೆಳಗೊಂದಿರಿಸಿ, ಪ್ರೆಸ್ಸಿಗೆ ಕಳುಹಿಸಿ. ಅವರು ಯಾವ

ಅಷ್ಟ ಮಾತನ್ನಾದರೂ ಆಡದೆ, ಮೊಳೆ ಜೋಡಿಸುವರು. ನೀವು ಉತ್ತಮ ಶಿಶು ಸಾಹಿತಿಯಾದರೆ ಅವರಿಗೇನೂ ಕೊಟ್ಟೆಕಿಚ್ಚಿಲ್ಲವೆಂದು ತೋರುತ್ತದೆ.

ಮತ್ತೊಂದು ಉಪಾಯವೂ ಇದೆ. ಅದರ ರೀತಿ ಮಾತುಗಳೇ ಬೇಕಿಲ್ಲ. ಮಕ್ಕಳೆಲ್ಲ ಮೂಢರು, ಮೃಗಗಳು; ಪಶುರ್ವೇತ್ತಿ ಎಂದು ಕೇಳಿಲ್ಲವೆ? ಅದ್ದರಿಂದ, ಅವಕ್ಕೆ ಗಾನವೆಂದರೆ ಹಿತ. ಅದಕ್ಕಾಗಿ, ಬರೀ ಶಬ್ದಗಳಿಂದಲೇ ಪದ್ಯ ರಚಿಸಬಹುದು. ಇಂಥ ಪದ್ಯಗಳನ್ನು, ಮಹಡಿ ಮನೆಗಳಂತೆಯೇ, ಕೆಳಗಿಂದ ಮೇಲಕ್ಕೆ, ಕಟ್ಟುವುದೇ ಸುಲಭ. "ಕೂಡಿತು ಮೇಳ, ಹಾಡಿತು ತಾಳ, ಸೋಮನ ಎರಡೂ ಕಿವಿಗಳಲಿ" ಎಂಬುದೇ ಅಡಿಪಾಯ. ಇನ್ನು, ಬೇಸ್‌ಮೆಂಟು, ಗೋಡೆ, ತಾರ್ಸಿ, ಪಾರಪೆಟ್ಟುಗಳು ಸುಲಭ.

ಸನಿಧಾ ಮಗರೀ ಸನಿಧಾ ಪಗರಿ ರಿಗಪ ಪಾಮಗರಿ
ಟೊಂಯ್ ಟೊಂಯ್ ಟೊಂಯ್ ಟಂಟೊಂಯ್ ಟೊಂಯ್‌ಟಂ
ತಕ್ಕ ಧಿಮ ಧಿಮ ಧಿಮ ತಾಂ ಧೋಂ ಧೋಂ ತಕ
ಟಂಗ್ ಟಂಗ್ ಟಂಗ್ ಟಂಗ್ ಟಂಗ್ ಟಂಗ್ ಟಂಗ್ ಟಂಗ್

ಕೂಡಿತು ಮೇಳ ಹಾಡಿತು ತಾಳ ಸೋಮನ ಎರಡೂ ಕಿವಿಗಳಲಿ. ಅತ್ಯುತ್ತಮ ಶಿಶುಗೀತೆ ಅಂದರೆ ಇದು; ಎರಡೇ ನಿಮಿಷದ ಶ್ರಮದಿಂದ ಇಂಥದ್ದನ್ನು ಎಂಥವನೂ ರಚಿಸಿ, ಕನ್ನಡನಾಡಿನ ಕೂಸುಮರಿ ಎದುರು ಸಮರ್ಪಿಸಬಹುದು.

ಹೀಗೆಯೇ ಪಕ್ಷಿ ಮೃಗಾದಿಗಳ ಅನುಕರಣ. ಜಿಂಕೆ ಮರಿ, ಗಡ್ ಗಡ್ ಗಡ್; ಕಪ್ಪೆ ಮರಿ ಕುಪ್ ಕುಪ್; ಕೋತಿ ಮರಿ ಛಂಗ್ ಛಂಗ್ ಛಂಗ್; ರೋತಿ ಮರಿ, ಆ ಆ ಆ... ಇದೊಂದು ಪದ್ಯ. "ಕುಹೂ ಕುಹೂ ಕೋಗಿಲೆ ಗಾನ. ಉಹೂ ಉಹೂ, ಸಾಕೂ ಗಾನ"— ಮತ್ತೊಂದರ ಮೊದಲೆರಡು ಪಂಕ್ತಿ. "ಸಿಂಹರಾಜ— ಹಾಂ! ಮಂಗರಾಜ— ಗ್ರಾಂ! ಪೆಂಗರಾಜ ಕೂಂ! ಲಿಂಗರಾಜ—ಹೋಂ!" ಮತ್ತೊಂದು. ಶಿಶು ಕವಿಗಳೆಲ್ಲ ಆಶುಕವಿಗಳು ಕ್ಷಣಕ್ಕೊಂದು ಮಣ ತಯಾರಿಸಿ ಋಣ ತೀರಿಸುವುದಕ್ಕೆ ಇದೊಂದು ಸದವಕಾಶ. ಛಾತಿ ಇರುವವರೆಲ್ಲ ಈ ಕ್ಷೇತ್ರಕ್ಕೆ ನುಗ್ಗಿರಿ.

—ರತ್ನಗಿರಿ.

ಪೋಸ್ಟ್ ಶಿವಣ್ಣ

"ಷಡ್ಭಿರ್ಮನುಷ್ಯ ಚಿಂತಾನಾಂ ಸಪ್ತಮಂ ದೈವ ಚಿಂತನಂ" ಎಂಬುವಂತೆ ಶಿವಣ್ಣ ಆರು ಸಲ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಫೇಲಾಗಿ, ಏಳನೇಸಲವಾದರು ದೈವನಿಯಾಮಕದಂತೆ ಪಾಸಾಗಬಹುದೆಂಬ ಅವನ ನಿರೀಕ್ಷೆ ತಪ್ಪೇ ಆಯಿತು. ಏಳನೇ ಸಲವೂ ಅವನು ಫೇಲಾದ. ಈ ಸಲ ನಷ್ಟವಾದಹಾಗೆ, ಆತ್ಮಗೌರವ, ಅವನಿಗೆ ಎಂದೂ ನಷ್ಟವಾಗಿರಲಿಲ್ಲ ಪಾಪ! ಮೂರು ನಾಲ್ಕು ತಿಂಗಳು ಮನೆ ಬಿಟ್ಟೇ ಹೊರಗೆ ಬರಲಿಲ್ಲ. ಅವನು. ಕಡೆಗೆ ಅವನು ಈಚೆಗೆ ತಲೆ ಹಾಕಿದ್ದು ಪೋಸ್ಟ್‌ಮ್ಯಾನ್ ಇಬ್ರಾಹಿಂ ಕೆಲಸ ಬಿಟ್ಟಾಗಲೇ.

ಅದೇನೋ ಗಾದೇ ಹೇಳೋಹಾಗೆ, ಶಿವಣ್ಣನ್ನ ಇ ಡಿ. ಡಿ. ಎ ಕೆಲಸಕ್ಕೆ ಸ್ವಯಂ ಪೋಸ್ಟ್‌ಮಾಸ್ಟರೇ ಕರೆದರು—ತಿಂಗಳಿಗೆ ಹತ್ತೋ - ಹನ್ನೆರಡೋ ಸಂಬಳದ ಮೇಲೆ. ಟಪ್ಪಾಲ್ ಇಲಾಖೆ, ಇಂದಲ್ಲ ನಾಳೆ ಭಾಗ್ಯ ತರುತ್ತೇಂತ ಸೇರಿಕೊಂಡ ಶಿವಣ್ಣ.

ಹೆಡ್ ಪೋಸ್ಟ್‌ಮನ್ ಹಿರಣ್ಣಯ್ಯನ ಸಹಾಯವಿಲ್ದಿದ್ರೆ, ಶಿವಣ್ಣ ತನ್ನ ಕೆಲಸಾನ ಕಳ್ಕೊಳ್ಳಬೇಕಾಗ್ತಿತ್ತು. ಸರ್ವೀಸಿಗೆ ಸೇರಿ ಆರೇಳು ವರ್ಷಕ್ಕೆ ಮೀರಿದ್ದರೂ ಅವನು 'ಓನಾಮ' ತಿದ್ದುತ್ತಲೇ ಇದ್ದಾನೆ. ಇದಕ್ಕೆ ಕಾರಣವೂ ಇಲ್ದೇ ಇಲ್ಲ. ವಿಳಾಸ ಪೂರ್ತಿ ಓದಿಕೊಂಡೋ, ಇಲ್ಲಾ ಅರ್ಥ ಮಾಡ್ಕೊಂಡೋ ಕಾಗದಗಳನ್ನ ತಲಪ್ಸೋ ಬುದ್ಧೀನ ಅವನಿಗಿನ್ನೂ ದೇವರು ಕರುಣಿಸಿಯೇ ಇಲ್ಲ. ಒಂದೇ ಹೆಸರಿನೋರು ನಮ್ಮೂರಲ್ಲಿ ಜಾಸ್ತಿ ಇದ್ರೂ, ಅವರ ಕಸುಬುಗಳು ಬೇರೆ ಬೇರೆ. ಇಂಥಾದ್ರಲ್ಲೂ ಶಿವಣ್ಣನಿಗೆ ನಾಮ ಒಂದೇ ಪ್ರಧಾನ. ಈ ಕಾರಣ ಅನೇಕರಿಗೆ ಅವರ ಕಾಗದಗಳನ್ನೇ 'ನಾಮ' ಹಾಕುತ್ತಾನೆ. ಅವನಿಗೆ "ಸರ್ವಂ ಬ್ರಹ್ಮಮಯಂ." ಶ್ಯಾನುಭೋಗ ಶ್ರೀಕಂಠಮೂರ್ತಿಯವರ ಕಾಗದ, ಸ್ಯಾನಿಟರಿ ಶ್ರೀಕಂಠಯ್ಯನವರಿಗೂ, ಅವರದು ಡಿಪೋ ಗುಮಾಸ್ತೆ ಶ್ರೀಕಂಠರಾಯರಿಗೂ, ತಲಪುವುದನ್ನ ಆಶ್ಚರ್ಯ ಅಂತ ಹೇಳದೇ ಇದ್ದರೂ, ವೆಂಕಟೇಶಯ್ಯನವರ ಕಾಗದ ಶ್ರೀನಿವಾಸಮೂರ್ತಿಗೂ, ಕೃಷ್ಣ ಪಂಡಿತರದು ರಾಮಕೃಷ್ಣ ಶಾಸ್ತ್ರಿಗಳಿಗೂ

ತಲುಪುವುದು ಸೋಜಿಗವೇ ಸರಿ. ಇದಕ್ಕೆ ಶಿವಣ್ಣನ ವಿಶಾಲ ಮನೋಭಾವವೇ ಕಾರಣ. "ದೇವರು ಒಬ್ಬನೆ. ಅವನಿಗೆ ಅನಂತ ನಾಮಗಳು" ಅನ್ನುವ ತತ್ವ ಅವನದು.

ಅವನು ಸರ್ವೀಸಿಗೆ ಸೇರಿದಾರಭ್ಯ ಇಂದಿನವರೆಗೂ Misdelivery Complaints ಇದ್ದೇ ಇವೆ. ಉರ್ದು ಶಾಲೆಯ ಕಾಗದಗಳು ಕನ್ನಡ ಶಾಲೆಗೂ, ಬಾಲಕಿಯರ ಶಾಲೆಯದು ಬಾಲಕರ ಶಾಲೆಗೂ, ತಾಲ್ಲೋಕ್ ಕಛೇರಿಯದು ಪೋಲೀಸ್ ಆಫೀಸಿಗೂ ತಪ್ಪಿ ತಲಪುವುದು ಬಹಿರಂಗವಾಗಿ ಬಯಲಾಗದಿದ್ದರೂ, ಸಂಬಂಧಪಟ್ಟವರು ತಮ್ಮ ಅನುಕೂಲಕ್ಕೆ ಸಹಕಾರಿಯಾದ ಈ ಪ್ರಸಂಗದಿಂದ ಶಿವಣ್ಣನಿಗೆ, "ಶುಕ್ರಿಯಾ" (Thanks) ಅರ್ಪಿಸುತ್ತಾರೆ.

ಕೆಲವು ದಿನಗಳ ಹಿಂದೆ ಶಿರಸ್ತೇದಾರ್ ವೆಂಕಟೇಶಯ್ಯರ್‌ಗೆ. "ತಂದೆ ಖಾಯಿಲೆ, ತಕ್ಷಣ ಬರುವುದು." ಎಂದು ಬಂದಿದ್ದ ಕಾರ್ಡನ್ನು ಹೈಸ್ಕೂಲ್ ಅಕೌಂಟೆಂಟ್ ವೆಂಕಟೇಶಯ್ಯನಿಗೆ ತಲಪಿತು. ಆ ಪ್ರಾಣಿ ಹೆಡ್‌ಮಾಸ್ಟರ್‌ನ ಗೋಲನ್ ಹೊಡೆದು ರಜಾ ಗಿಟ್ಟಿಸಿಕೊಂಡು ಮೈಸೂರಿಗೆ ಹೊರಟೇಬಿಟ್ಟರು ಗಾಭರಿಯಿಂದ. ಅಲ್ಲಿ ಗುಂಡುಕಲ್ಲಿದ್ದ ಹಾಗಿದ್ದ ತಂದೆಯನ್ನು ಕಂಡು, ಎರ್‍ರಾಬಿರ್‍ರಿ ರೇಗಲು, ಅವರೆಲ್ಲರೂ ನಾವು ಕಾಗದವನ್ನೇ ಬರೆಯಲಿಲ್ಲವೆಂದರು. ಆಗ ತನಗೆ ಬಂದಿದ್ದ ಕಾರ್ಡನ್ನು ಪುನಃ ವಿಮರ್ಶಿಸಲು, ಶಿವಣ್ಣನ ತಪ್ಪಿನ ಜೊತೆಗೆ ತನ್ನ ತಪ್ಪೂ ಆತನಿಗೆ ಹೊಳೆದು, ಊರಿಗೆ ಬಂದು, ಶಿವಣ್ಣನ ಬದಲು ತಾನೇ ಆ ಕಾರ್ಡನ್ನು ಶಿರಸ್ತೇದಾರರಿಗೆ ತಲಪಿಸಬೇಕಾಯಿತು.

ಎರಡು ತಿಂಗಳ ಹಿಂದೆ ಶೇಕ್‌ದಾರ್ ನಾರಾಯಣಸ್ವಾಮಿಗೆ ಆದ ಅನುಭವವನ್ನು ಹೇಳಿದರೆ, ಶಿವಣ್ಣನಿಗೆ "ವಿನೋದ ರತ್ನಾಕರ" ಅನ್ನುವ ಬಿರುದನ್ನು ಕೊಡಬಾರದೇಕೆ ಎಂದೆನ್ನಿಸುತ್ತದೆ. ಅವನು ವಿನೋದಕ್ಕಾಗಲೀ, ವಿರೋಧಕ್ಕಾಗಲೀ ಹೀಗೆ ಮಾಡುವುದಿಲ್ಲವೆಂದು ನಮಗೆಲ್ಲಾ ಗೊತ್ತಿದ್ದುದರಿಂದಲೇ ಅವನಿಗೆ ಈ ಊರಿನಿಂದ ಇನ್ನೂ ವರ್ಗವಾಗಿರಲಿಲ್ಲ. ಇವನ ವರ್ಗಕ್ಕೆ ಈ ಪ್ರಸಂಗವೂ ಕಾರಣವಾಯಿತು.

ನಾರಾಯಣಸ್ವಾಮಿಗೆ ಒಂದು ಕಾಗದ ಬಂತು. ಅಡ್ರೆಸ್ ಇಂಗ್ಲೀಷಿನಲ್ಲಿತ್ತು. ಪಾಪ! ಅವನ ಹೆಂಡತಿ ವೆಂಕಮ್ಮನವರಿಗೆ ಇಂಗ್ಲೀಷ್ ಸ್ವಲ್ಪ ಸ್ವಲ್ಪ ಬಂದರೂ, ವಿಳಾಸವನ್ನು ಪೂರ್ತಿ ಓದಿ, ಸರಿಯಾಗಿ ಅರ್ಥಮಾಡಿಕೊಳ್ಳುವಷ್ಟು 'ಇಲ್ಲ'ವೆಂದೇ ಹೇಳಬೇಕು. ನಾರಾಯಣಸ್ವಾಮಿ ಹಳ್ಳಿಗೆ ಹೋಗಿದ್ದ ಕಾರಣ ತಾನೇ ಓಡೆದು ಓದಿದಳು. ಓದಿದ ತಕ್ಷಣ ಕೋಪ ತಾಪಗಳು ಉಕ್ಕಬೇಕೇ?

ಜತೆಗೆ ಕಣ್ಣಲ್ಲಿ ನೀರೂಬಂತು—ಸ್ವಲ್ಪ ಹೊತ್ತಿನಮೇಲೆ ನಾರಾಯಣಸ್ವಾಮಿ ಬಂದ.

ಸರ್ಕೀಟು ಹೋಗಿ ಸುಸ್ತಾಗಿ ಬಂದ ಗಂಡನನ್ನು ಎದುರುಗೊಳ್ಳುವ ಹೆಂಡತಿಯ ಮುಖ, ಅವನಿಗೊಂದು 'ಟಾನಿಕ್' ಅಂತ ಹಿರಿಯರು ಹೇಳ್ತಾರೆ. ಪ್ರತಿ ದಿನವೂ ಈ 'ಟಾನಿಕ್' ಸೇವಿಸುತ್ತಿದ್ದ ನಾರಾಯಣಸ್ವಾಮಿಯ ಕಣ್ಣುಗಳಿಗೆ ಅವತ್ತು 'ಕಣ್ಣೀರು' ಕಾಣಿಸಬೇಕೇ?

"ಏನೋ ಅನಾಹುತವಾಗಿರಬೇಕೆಂದುಕೊಂಡ ನಾರಾಯಣಸ್ವಾಮಿ, "ಯಾಕೆ ಅಳ್ತಾ ಇದ್ದೀ?" ಎಂದ. ಇನ್ನೇನು ಮಾಡಲಿ, ಹೇಳಿ. ಇಕೊಳ್ಳಿ ನಿಮ್ಮ ತಂಗಿ ಬರೆದಿರೋ ಕಾಗ್ದ... ಬೆಂಗಳೂರ್ನಲ್ಲಿದ್ದಾಗ ಏನೋ ನಡೆದ ಮಾತಿಗೆ ಈ ಕಾಗದದಲ್ಲೂ ತೋರ್ಸಿಬೇಕೇ ಖಾರಾನಾ?...ಇವಳು ಹೀಗ್ಬರದಾಕ್ಷಣ ನನಗೆ ಹಾಗಾಗುತ್ಯೇ..? "ಅಂತ ಒಂದೇ ಉಸುರಿಗೆ ಹೇಳಿದಳು ವೆಂಕಮ್ಮ. ಪಾಪ, ಅವನಿಗೆ ಏನೂ ತೋಚಲಿಲ್ಲ. "ಅದೇನ್ಬರೆದಿದ್ದಾಳೆ ಹೇಳ್ಬಿಡೇಂ"ತ ಅಂದ. "ಆ ಅಶುಭಾನ ನನ್ನ ಬಾಯಿಂದ್ಲೇರೇ ಕೇಳ್ಬೇಕೇ?... ಬೇಡಿ, ಸ್ವಲ್ಪ ನೋಡೇಬಿಡೀಂ"ತ ಅಳುತ್ತಲೇ ಆಕೆ ಹೇಳಿದಳು. ಕಾಗದ ಬಿಚ್ಚಿ ಮನಸ್ಸಿನಲ್ಲೇ ಓದಲು ಶುರುಮಾಡಿದ.


"ಗಂಗಾ ಭಾಗೀರಥೀ ಸಮಾನರಾದ ಮಾತೃಶ್ರೀಯವರಿಗೆ ನಮಸ್ಕಾರಗಳು"... ಇತ್ಯಾದಿಯಾಗಿ, ಕಡೆಯಲ್ಲಿ 'ಅಚ್ಚಮ್ಮ' ಎಂದಿತ್ತು. ನಾರಾಯಣಸ್ವಾಮಿಗೆ ಕೋಪ ಬರಲಿಲ್ಲ. ನಕ್ಕ...."ಇದು ನಿನ್ನ ಕಾಗದವಲ್ಲಾ ಕಣೇ.... ತಪ್ಪು ತಿಳ್ಕೊಂಡೆಯಲ್ಲಾ" ಅಂತಂದ. "ಇಲ್ಲಾಂದ್ರೇ, ನನಗೇ ಬರೆದಿರೋದು ನನ್ನನೇ ಹೀಗೆಲ್ಲಾ ಸಂಬೋಧಿಸಿ ಅಶುಭ ಕೋರಿರೋದು" ಅಂತ ಪುನಃ ವೆಂಕಮ್ಮ ವಾದ ಹಿಡಿದಳು. "ಅಲ್ವೇ... ನನ್ನ ತಂಗಿ ಹೆಸರು ಲಕ್ಷ್ಮಿ ಅಲ್ವೇನೇ? ಹೋಗಲಿ, ಇಲ್ಲಿ ಅಚ್ಚಮ್ಮಾಂತಿರೋದನ್ನಾದ್ರೂ ನೋಡ್ಬೇಡ್ವೇ, ನೀನು?" ಅಂತ ಪುನಃ ನಾರಾಯಣಸ್ವಾಮಿ ಕೇಳಿದ. "ಅದೆಲ್ಲಾ ಬೇಕೂಂತ ಹಾಗೆ ಬರೆಯೋದು. ಲಕ್ಷಮ್ಮನ್ನ, ಅಚ್ಚೀಂತ ನೀವೆಲ್ಲಾ ಕರೀತಿರಲಿಲ್ವೆ—ಹಾಗೇನೇ ಬರೆದಿದ್ದಾಳೆ ಅವಳು" ಅಂತ ವೆಂಕಮ್ಮ ಅನ್ನುತ್ತಾ, "ಹೋಗಲಿ ಆ ಕವರ್ ತೊಗೊಂಡ್ಬಾ. ನೋಡೋಣ" ಅಂತ ನಾರಾಯಣಸ್ವಾಮಿ ಕವರ್ ತರಿಸಿ ವಿಳಾಸ ಓದಿದ—"ಮಿಸಸ್ ವೆಂಕಮ್ಮ (ವೈಫ್ ಆಫ್ ಲೇಟ್ ನಾರಾಯಣಸ್ವಾಮಿ) ಕೇರ್ ಆಫ್ ಮಿಸಸ್ ರಂಗಮ್ಮ. ಡೋರ್ ನಂ. ೧೭೦" ಅಂತಿದ್ದದ್ದನ್ನ ನೋಡಿ, "ಈ ಕಾಗದ ಬಂದಿರೋದು ಬದುಕಿರೋ ನಾರಾಯಣಸ್ವಾಮಿ ಹೆಂಡತಿ ವೆಂಕಮ್ಮನಿಗಲ್ಲಾ ಕಣೇ, ದಿವಂಗತ ನಾರಾಯಣಸ್ವಾಮಿ

ಹೆಂಡತಿಯವರಿಗೆ. 'ಲೇಟ್' ಅಂತ ಬರೆದಿರೋದನ್ನಾದ್ರೂ ನೋಡಿದ್ಯಾ? ಆ ಶಿವಣ್ಣ ಯಾರದೋ ಕಾಗ್ದಾನ ಇಲ್ಲಿ ಕೊಟ್ಟಿದ್ದಾನೆ, ಸರಿಯಾಗಿ ವಿಚಾರಿಸದೆ. ಹೋಗಲಿ ಹೋಗಿ ರಂಗವ್ಮನ್ನೋರ್ನ ಕೇಳಿ ತಿಳ್ಕೊಂಡು "ಆ ವೆಂಕಮ್ಮ ನೋರಿಗೆ ತಲಿಪಿಸ್ಬಿಟ್ಬಾ" ಅಂತ ನಾರಾಯಣಸ್ವಾಮಿ ಕಳುಹಿಸಿದ.

ವೆಂಕಮ್ಮನಿಗೆ ಹಸನ್ಮುಖವಾಯ್ತು. ನಗ್ತಾ ಕಾಗ್ದಾನೂ ತೊಗೊಂಡು ಪಕ್ಕದ್ಮನೇ ರಂಗವ್ಮೋರನ್ನ ನೋಡೋಕೆ ಹೋದಳು. ಅಲ್ಲಿ ವಿಚಾರಿಸಿದ್ರಲ್ಲಿ ಅವರ ಮನೇಗೆ ಬರೋ ಮಡೀ ಹೆಂಗಸರ ಹೆಸರೂ ವೆಂಕಮ್ಮ ಅಂತ್ಲೂ, ಅವರ ದಿವಂತಗ ಗಂಡನ ಹೆಸರೂ ನಾರಾಯಣಸ್ವಾಮಿ ಅಂತ್ಲೂ ತಿಳೀತು. ಅವರ ಕಾಗದಾನ ಅಲ್ಲಿ ಕೊಟ್ಟು ವೆಂಕಮ್ಮ ವಾಪಸ್ ಬಂದಳು.

ಆವತ್ತೇ ನಾರಾಯಣಸ್ವಾಮಿ ಪೋಸ್ಟ್‌ಮಾಸ್ಟರಿಗೆ ಈ ವಿಷಯ ಬರೆದು ಹಾಕಿ, ಶಿವಣ್ಣನಿಗೆ ತಾಕೀತುಮಾಡಬೇಕೆಂದು ತಿಳಿಸಿದ. ಈ ಕಾರಣ ಶಿವಣ್ಣನಿಗೆ ನಮ್ಮೂರಿಂದ ವರ್ಗವಾಯಿತು.

—"ಗಾನರಾಜ್"



"ಫಾತಿಮಾ! ನನ್ನಮೇಲೆ ಕೋಪ ಮಾಡಿಕೋಬೇಡ
ಫಾತೀಮಾ... ಅಂದಹಾಗೇ ನೀನು ಫಾತೀಮಾ ತಾನೇ?"

ನಶ್ಯ

ನಾನೊಬ್ಬ ಭಾಷಣಕಾರ, ನನ್ನ ಭಾಷಣಗಳಿಗೆ ನಶ್ಯದ ಪುಡಿಯೇ ಉತ್ತೇಜನ. ಆ ಹೊತ್ತು ಡಬ್ಬಿಯಲ್ಲಿ ನಶ್ಯ ಮುಗಿದು ಹೋಗಿತ್ತು. ದಾರಿಯಲ್ಲೇ ಟ್ಯಾಕ್ಸಿಯನ್ನು ಅಂಗಡಿ ಎದುರು ನಿಲ್ಲಿಸಿ, ಎರಡಾಣೆಗೆ ತೆಗೆದುಕೊಂಡು ಡಬ್ಬಿ ಭರ್ತಿಮಾಡೋಣವೆಂದುಕೊಂಡೆ. ನಶ್ಯ ಸೇವಕನಾದರೂ, ನಶ್ಯ ಸೇವಿಸುವುದು ಹೇಯವೆಂಬ ಅರಿವೂ, ಆ ದುರಭ್ಯಾಸಕ್ಕೆ ಬಿದ್ದಿರುವುದು ಅಪಮಾನಕರವೆಂಬ ಸಂಕೋಚವೂ ನನ್ನನ್ನು ಚುಚ್ಚುತ್ತಿತ್ತೆಂದು ಹೇಳಬಲ್ಲೆ.

ಅರ್ಧ ದಾರಿಯಲ್ಲಿ ನನ್ನ ಮಿತ್ರರು ಟ್ಯಾಕ್ಸಿಯೊಳಕ್ಕೆ ಅಧ್ಯಕ್ಷ ಮಹಾಶಯರನ್ನೂ ಕೂರಿಸಿದರು—ನನ್ನ ಬಲಭಾಗದಲ್ಲೇ. ಅವರೊಬ್ಬರು ಹಿರಿಯರು, ನನಗಿಂತ ದೊಡ್ಡವರು. ಮಹಾ ತ್ಯಾಗಿಗಳು. ಸೇವಾ ಕ್ಷೇತ್ರದಲ್ಲೇ ಹಣ್ಣಾದವರು. ಅವರಿಗೆ ಗೊತ್ತಾಗದಂತೆ ಹೇಗೆ ನಶ್ಯವನ್ನು ಕೊಂಡುಕೊಳ್ಳುವುದು, ಡಬ್ಬಿಗೆ ಭರ್ತಿಮಾಡುವುದು, ಎಂಬುದೇ ನನ್ನ ಸಮಸ್ಯೆ ಆಯಿತು.

ನಶ್ಯದಂಗಡಿ ಸಮೀಪಿಸುತ್ತ ಬತ್ತು ಮೂಗೆಲ್ಲ ಮೋಹದಿಂದ ತುಂಬಿತು. ಕಿಸೆಯೊಳಗಿನ ಡಬ್ಬಿ ಕಿಲಕಿಲ ಕುಲುಕಾಡಿತು. ಟ್ಯಾಕ್ಸಿ ಮುಂದಕ್ಕೆ ಓಡಿತು. ನಾನು ಅದನ್ನು ನಿಲ್ಲಿಸಲಿಲ್ಲ. ದೇವಾ ನೀನೇ ಕಾಪಾಡು ಎಂದು ಮೂಗಿನ ಮೇಲೆ ಬೆರಳಿಟ್ಟೆ.

ಸಭಾ ಮಂಟಪವನ್ನು ಇಬ್ಬರೂ ಹತ್ತಿದೆವು ಪ್ರಾರ್ಥನೆ ಮುಗಿಯಿತು. ಆದರೆ, ನನ್ನ ಪ್ರಾರ್ಥನೆ ಮುಗಿಯುವುದೆಂತು?


ಆಗ, ಅಧ್ಯಕ್ಷರು ತಮ್ಮ ಬಲ ಕಿಸೆಯಿಂದ ಕರವಸ್ತ್ರವನ್ನು ಹೊರ ತೆಗೆದರು. ನಶ್ಯದ ಬಣ್ಣದ್ದು? ಎಲಾ ಇವನೆ!... ನಶ್ಯ ಸೇವನಾ ಸೂಚಕವಾದ ಕರವಸ್ತ್ರವನ್ನು, ನನ್ನನ್ನು ಮೂದಲಿಸುವುಸಿಕ್ಕಾಗಿಯೇ, ಹೊರಗೆಳೆದನಲ್ಲಾ ಎಂದು ನಾನು ಅದನ್ನೇ ನೋಡುತ್ತ ಕುಳಿತೆ.

ಆವರ ಕೈ ಎಡಜೋಬಿನೊಳಕ್ಕೆ ಇಳಿಯಿತು. ಒಂದು ಬೆಳ್ಳಿ ಡಬ್ಬಿಯೊಂದಿಗೆ ಹೊರಬಂತು. ನಿಜಕ್ಕೂ, ಪರಮಾತ್ಮ ಎಂಬ ವಸ್ತು ಪ್ರಪಂಚದ

ಲ್ಲಿದೆ; ಅದಕ್ಕೆ ಕಣ್ಣಿಲ್ಲದಿದ್ದರೂ, ಕಿವಿ ಇದೆ; ನನ್ನ ಅಹವಾಲನ್ನು ಅದು ಕೇಳಿತು,—ಎಂದುಕೊಂಡೆ.

ಅಧ್ಯಕ್ಷರಕಡೆ ಕೈನೀಡಿದೆ, ಹಲ್ಲುಕಿರಿದೆ, ಮೂಗು ಕೆರೆದೆ. ಅವರ ಮುಖ ಜೋಲು ಬಿತ್ತು. "ತಾವೂ ನಶ್ಯ ಹಾಕ್ತೀರೇನು? ತಮ್ಮ ಹತ್ತಿರ ಗುಟ್ಟೀನು? ಹೇಳೇಬಿಡ್ತೇನೆ ನನ್ನ ಡಬ್ಬೀನೂ ಖಾಲಿ. ದಾರಿಯಲ್ಲಿ ಯಾವುದಾದರೂ ಅಂಗಡಿ ಎದುರು ಟ್ಯಾಕ್ಸೀನ್ನ ನಿಲ್ಲಿಸಿ ಭರ್ತಿಮಾಡಿಕೊಳ್ಳೋಣ ಅಂತ ಇದ್ದೆ. ತಮ್ಮನ್ನ ನೋಡುತ್ತಲೂ, ತಾವು ತುಂಬಾ ಸಭ್ಯರು ಭಾರಿ ದೊಡ್ಡ ಮನುಷ್ಯರು, ನನ್ನ ವಿಷಯವಾಗಿ ಗೌರವ ಇಟ್ಟಿರುವವರು, ತಮಗೆ ಏಕೆ ದ್ರೋಹ ಮಾಡೋಣ ಅಂತ, ಸುಮ್ಮನಾದೆ. ಈಗ, ನನ್ನಲ್ಲಿ ನಶ್ಯ ಇಲ್ಲ, ತಮ್ಮಲ್ಲೂ ಇಲ್ಲ ...ಅಂತೂ, ಇವತ್ತಿನ ಸಭೆ ತೀರ ಸಪ್ಪೆ!" ಅಂದರು.

— ಕಾಮತ್.



ಕಂಡಕ್ಟರ್—ಡ್ರೈವರಿಗೆ:—ನಿಂಗೆ ಆಗಲೇ ಹೇಳಿದೆ ಆ "ಮೀರಾ" ಹಾಡು ಹೇಳ್ತಾ ಇದ್ದರೆ ಅಪಘಾತ ಸಿದ್ಧ ಅಂತ.

ಸ್ನೇಹ

ನೀನು ಕಾರಿನೊಡೆಯನು,
ನಾನು ಕಾಲುನಡಿಗೆಯವ—
ದಾರಿ ನಡುವೆ ಕಂಡರೊಡನೆ
ಇಳಿದು ಕೈಯ ಕುಲುಕುವಿ!
ನೀನು ಹರಕು ಚೀಲ ಹಿಡಿದು,
ನಾನು ಕುದುರೆ ಏರಿ ಮೆರೆಯೆ—
ದಾರಿ ನಡುವೆ ಕಂಡರೊಡನೆ
ಇಳಿದು ಕೈಯ ಕುಲುಕುವೆ!

—ನಾ ಕ.



ಆತ—ಇಲ್ಲಿ ಚಾಕರಿ ಸಿಕ್ತೇನೋ!

ಆವ—ಹೌದು ಕಣೋ! ಆದರೆ ಖಾಯಂ ಸರ್ಕಾರಿ ಕೆಲಸ ಸಿಗೋತನಕ ಇಲ್ಲೇ ಇರೋಣ ಅಂತಿದ್ದೀನಿ!

ಕಳ್ಳ-ಕಾಕ

ಎಲ್ಲವನೋ ಕಳ್ಳನೆಲ್ಲವನೋ, ಕಾಕ
ಎಲ್ಲವನೋ ಕೊರ್ಮನೆಲ್ಲವನೋ ?
ಅಲ್ಲವನೋ ಕಳ್ಳ ನಿಲ್ಲವನೋ, ಕಾಕ
ಇಲ್ಲವನೋ ಕೊರ್ಮನಲ್ಲವನೋ.

ಕೇರೀ ಕಚೇರೀಲಿ ಸೇರವನೋ, ಕಾಕ
ದಿಲ್ಲೀಲಿ ದಲ್ಲಾಲಿ ಹೇರವನೋ,
ಕೈರೊ ಕರಾಚೀಲಿ ಕತ್ತಲಿಡೋ ಕಾಕ
ಕಾನ್‌ಬರಾ ಕೇಪ್‌ಟೌನ ಸುತ್ತವನೋ.

ಹೇಗಲ್ಲೂ ಹೇಗೇಗೋ ಹಬ್ಬವನೋ, ಕಾಕ
ಹಾಲಿವುಡ್ಡೆಲ್ಲಾನೂ ಹಬ್ಬವನೋ ;
ಹೆಲ್‌ಸಿಂಕ್ಕಿ ಹೆಲಸಲ್ಲೂ ಕೂತವನೋ. ಕಾಕ
ಹೆವನನ್ನೇ ಹೊಲಸೆನಿಸಿ ಹೂತವನೋ.

ಬೇವಿನ್ನ ವೇಷವ ಹೂಡವನೋ, ಕಾಕ
ಟ್ರೂಮನ್ನನ ಘೋಷದಿ ಕೂಡವನೋ ;
ಯೂ ಎನ್ನೊ ಟಮಟೇನ ಬಡಿದವನೋ, ಕಾಕ
ಹೂ ಎನ್ನೋ ಕಪಟಾನ ಹಿಡಿದವನೋ.

ಎಲ್ಲವನೋ ಕಳ್ಳನೆಲ್ಲವನೋ, ಕಾಕ
ಎಲ್ಲವನೋ ಕೊರ್ಮನೆಲ್ಲವನೋ ,
ಅಲ್ಲವನೋ ಕಳ್ಳನಿಲ್ಲವನೋ, ಕಾಕ
ಇಲ್ಲವನೋ ಕೊರ್ಮನಲ್ಲವನೋ.


— ಪಾಟಾಳಿ.

—o—

ರೈತರು ಬುದ್ಧಿವಂತರಾಗಬೇಕು

ನಮ್ಮ ತಾತಾ ಮುತ್ತಾತಂದಿರು ಹೇಳುತ್ತಿದ್ದ ಹಾಗೆ, ಬೇಸಾಯ ಮಾಡೋಕೆ ನಮ್ಮ ಹಳ್ಳಿಯವರ ಬುದ್ಧೀನೇ ಸಾಕು; ಗಟ್ಟಿ ರಟ್ಟೆ ಬೇಕು, ಹೈನಾದ ಎತ್ತುಬೇಕು, ಹಸನಾದ ನೆಲಬೇಕು. ಹಾಗೊಂದು ಹೀಗೊಂದು ಹನಿಬೇಕು. ಅಷ್ಟೆ. ಅಂಥಾ ಬುದ್ಧಿವಂತಿಕೆ ಏನೂ ಆಗಬೇಕಾಗಿರಲಿಲ್ಲ. ಆದರೆ, ಈಚೆಗೇನು ಹೊತ್ತು ಬಂದಿದೆ, ಅಂತೀರಾ? ಬೇಸಾಯ ಮಾಡೋರಿಗೆ ವಿಪರೀತ ಬುದ್ಧಿ ಬೇಕಾಗಿದೆ, ಅವರು ಅತೀ ಹುಷಾರಿ ತಕೊಬೇಕಾಗಿದೆ, ಒಸಿ ಸ್ಥಾನ ತಪ್ಪಿದರೂ ಎಲ್ಲಾನೂ ಎಡವಟ್ಟಾಗಿ, ತಲೆ ಮೇಲೆ ಚಪ್ಪಡಿ ಎಳ ಕೊಂಡ್ಹಾಗೇನೆ. ಯಾಕಂತೀರೋ, ಹಂಗ್ ಬೆಳಿ, ಹಿಂಗ್ ಬೆಳಿ, ಅದ್ನ ಹಾಕು, ಇದ್ನ ಹಾಕು, ಅಂತ ದಿನ ಬೆಳಗಾದರೆ ನಮಗೆ ಬೋಧ್ನೆ ಮಾಡಲಿಕ್ಕೆ ಹತ್ತವರಲ್ಲಾ, ಅವರ ಬೋಧ್ನೇಲಿ ಯಾವುದನ್ನ ಈ ಕಿವಿಯಿಂದ ಕೇಳಿ ಆ ಕಿವಿಯಿಂದ ಬಿಡಬೇಕು, ಯಾವುದನ್ನ ಕಿವಿಗೇ ಹಾಕ್ಕೋಬಾರದು, ಯಾವುದನ್ನ ಆಲಿಸಿದರೆ ಎಷ್ಟೆಷ್ಟು ಕೇಡು, ಅಂತ ಎಲ್ಲಾನೂ ಬಿಡಿಸಿ ಬಿಡಿಸಿ ಹುಷಾರಾಗಿರಬೇಕಾಗಿದೆ, ನಾವು ರೈತರು....ಅದ್ಕೇನೆ ನಾನು ಹೇಳೋದು, ಈಚೆಗೆ ರೈತರು ತುಂಬಾ ಬುದ್ಧಿವಂತರಾಗಿ, ಮೈ ಎಲ್ಲ ಕಣ್ಣಾಗಿ ಕೆಲಸ ಮಾಡಬೇಕಾಗಿದೆ, ಅಂತ.

—ನಿಂಗೇಗೌಡ.




ಅವರು ಹೇಳಿದ್ಹಾಗೆ ಆ ಕೆಂಪು ಡಬ್ಬಕ್ಕೇ ನನ್ನ ಓಟು ಹಾಕಿಬಿಟ್ಟೆ !!

ಹೆಸರಾಗೇನಿದೆ?

ಹೆಸರಾಗೇನಿದೆ ಹೆಸರಾಗೇನಿದೆ
ಅಂಬೋದ್ಯಾಕ್ಯಡ ಗೆಣ್ಯಾ-
ಹೆಸರಾಗಿರೋದು ಕೆಸರಾಗಿರೋದು
ಮ್ಯಾಗೆ ಫಕ್ನೆ ಕಾಣೋಕಿಲ್ಲ
ಮರೀಬ್ಯಾಡ ಕಂಡ್ಯಾ !

ಇಂಡ್ಯ ಇಂಡ್ಯ ಅಂಬೋದ್ಬಿಟ್ಟು
ಭಾರ್ತ ಅಂದ್ರು ಕಂಡ್ಯ-
ಎಲೆಕ್ಷನ್ನಿಗಿಳೀವಾಗ ವೋಟಿಗಂತ ಎಳೀವಾಗ
ಕುರುಕ್ಷೇತ್ರ ಆಗ್ದೇಯಿದ್ರೆ
ಸಾಕು ನಮ್ಮ ಇಂಡ್ಯ-
ಬದುಕ್ಕೊಂಡ್ಬಿ ಕಂಡ್ಯ !

—ಎ.ಎಸ್.ರಾಮಕೃಷ್ಣ.



ಕಳ್ಳನ್ನ ನಂಬಿದರೂ ನನ್ನನ್ನು ನಂಬಬೇಡ ಎಂತ ಯಾರೂ ಇಲ್ಲಿಗೆ ಬರೋದೇ ಇಲ್ವಲ್ಲಾ !!


ಬರುತ್ತದೆ!
ಪಾತಾಳಭೈರವಿ